ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 20 ಮೇ 24, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

* ವಿದ್ಯುತ್ ಕಡಿತ ಅನಿವಾರ್ಯವೆ ? ವಿದ್ಯುತ್ ಕಡಿತ ಯಾವಾಗ ಎಷ್ಟು ? ಇದೋ ಪಶ್ಚಿಮ ಬಂಗಾಳದ ಉದಾಹರಣೆ — ಪುಟ-3
* ಸಖಾವು ಕೃಷ್ಣ ಪಿಳ್ಳೈಯವರ ಪ್ರೇಮ ವಿವಾಹ ರೋಮಾಂಚಕಾರಿ ಕಥೆ — ಪುಟ-2
* ಹೋಟೆಲ್ ಕಾರ್ಮಿಕರ್ಯಐಕ್ಯ ಹೋರಾಟಕ್ಕೆ ಕರೆ. ಡಿ.ವೈ ಎಫ್.ಐ. ಮುಖಂಡರ ಮೇಲೆ ಹಲ್ಲೆ ವಿವಿಧ ಸುದ್ದಿಗಳು. — ಪುಟ-4
* ರೈತರನ್ನು ಒಕ್ಕಲೆಬ್ಬಿಸುವ ಸರ್ಕಾರಕ್ಕೆ ಧಿಕ್ಕಾರ ಇತರೇ ಸುದ್ದಿ – ಸಮಾಚಾರಗಳು — ಪುಟ-5

ಪಂಜಾಬ್ : ಕೇಂದ್ರ ಸರ್ಕಾರದ ಅಪಾಯಕಾರೀ ಸಮಯಸಾಧಕತೆ

ಬರ್ನಾಲಾ ಸರ್ಕಾರವನ್ನು ವಜಾ ಮಾಡಿ ಪಂಜಾಬಿನ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರಿ ಕೇಂದ್ರ ಸರ್ಕಾರ ಒಂದು ಅಪಾಯಕಾರೀ ಹೆಜ್ಜೆಯಿಟ್ಟಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿಗಳು ಬಲವಾಗಿ ಖಂಡಿಸುವ ಕ್ರಮವಿದು. ಕಳೆದ ಕೆಲವು ತಿಂಗಳಲ್ಲಿ ಸರ್ವ–ಪಕ್ಷ ಪ್ರಚಾರ ಖಾಲಿಸ್ತಾನೀ ಭಯೋತ್ಪಾದಕರನ್ನು ರಾಜಕೀಯವಾಗಿ ಜನರಿಂದ ದೂರಗೊಳಿಸುವ ಅಗತ್ಯ ಕೆಲಸಕ್ಕೆ ಬುನಾದಿ ಹಾಕಿಕೊಟ್ಟು ಜನರಲ್ಲಿ ಭರವಸೆ ತುಂಬಿತ್ತು. ಕೇಂದ್ರ ಸರ್ಕಾರದ ಈ ಕ್ರಮ ಅದನ್ನೆಲ್ಲಾ ಒಂದೇ ಏಟಿನಲ್ಲಿ ಮಣ್ಣುಗೂಡಿಸಿದೆ. ಆಳುವ ಪಕ್ಷದ ಸ್ವಾರ್ಥಪೂರ್ಣ ಹಾಗೂ ಅನೀತಿಯುತ ಹಿತಾಸಕ್ತಿಗಳಿಗಾಗಿ ರಾಷ್ಟ್ರೀಯ ಐಕ್ಯತೆಯನ್ನೇ ಬಲಿಗೊಡಲು ಕೂಡಾ ರಾಜೀವ ಗಾಂಧಿ ಸರ್ಕಾರ ಹೇಸುವುದಿಲ್ಲ ಎಂಬ ಸರ್ವವಿದಿತ ಭಾವನೆಯನ್ನು ಅದೀಗ ಮತ್ತೊಮ್ಮೆ ನಿಜವೆಂದು ತೋರಿಸಿಕೊಟ್ಟಂತಾಗಿದೆ.

ಕೇವಲ ಎರಡೂವರೆ ತಿಂಗಳ ಹಿಂದೆ ರಾಷ್ಟ್ರಪತಿಗಳ ಭಾಷಣದಲ್ಲಿ ಕೇಂದ್ರ ಸರ್ಕಾರ ಪಂಜಾಬ್ ಒಪ್ಪಂದವನ್ನು ಜ್ಯಾರಿಗೊಳಿಸುವ ಪಣತೊಟ್ಟು,ಬರ್ನಾಲಾರವರ ಮುಖಂಡತ್ವದಲ್ಲಿ ಪಂಜಾಬ್ ಸರ್ಕಾರ ಮತ್ತು ಪಂಜಾಬಿನ ಜನತೆ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವಲ್ಲಿ ಅನುಪಮ ಧೈರ್ಯ ತೋರಿಸಿದೆಯೆಂದು ಘೋಷಿಸಿತ್ತು. ನಂತರ ಕಳೆದ ಕೆಲವು ವಾರಗಳಲ್ಲಿ ಪಂಜಾಬಿನಲ್ಲಿ ಸರ್ವ–ಪಕ್ಷ ರ್‍ಯಾಲಿಗಳಲ್ಲಿ ನರಸಿಂಹರಾವ್ ಮತ್ತಿತರ ಕೇಂದ್ರ ಮಂತ್ರಿಗಳೂ ಸೇರಿದಂತೆ ಕಾಂಗ್ರೆಸ್ [ಐ] ರಾಷ್ಟ್ರೀಯ ಮುಖಂಡರು ಭಾಗವಹಿಸಿ ಮುಖ್ಯಮಂತ್ರಿಗಳಿಗೆ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಅವರ ಪ್ರಯತ್ನಗಳಿಗೆ ಬೆಂಬಲ ಘೋಷಿಸಿದ್ದರು. ಮತ್ತೇಕೆ ಈಗ ಈ ವಿಶ್ವಾಸಘಾತುಕ ಕೃತ್ಯ? ಹರ್ಯಾಣ ವಿಧಾನ ಸಭಾ ಚುನಾವಣೆಗಳನ್ನು ಹೇಗಾದರೂ ಮಾಡಿ ಗೆಲ್ಲಬೇಕೆಂಬ ಏಕಮಾತ್ರ ಗುರಿಯೇ ಈ ನಾಚಿಕೆಹೀನ ವಂಚನೆಗೆ ಕಾರಣ ಎಂಬುದು ವ್ಯಾಪಕ ಭಾವನೆ. ರಾಜ್ಯಪಾಲರು "ಎಚ್ಚರಿಕೆಯ ವರದಿ" ಯನ್ನಾಗಲೀ ತನ್ನ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ಸೃಷ್ಟಿಸಿದ ಅಪಾದನೆಗಳನ್ನಾಗಲೀ ಯಾರೂ ನಂಬಲಾರರು.

ಹಿಂದೆ ಸುನಿಲ್‌ದತ್‌ಗೆ ಪರವಾನಿಗೆ ನೀಡಿದಂತೆ ಈ ಉಗ್ರ ಕ್ರಮ ಕೈಗೊಳ್ಳುವ ಮೊದಲೇ ಪ್ರಧಾನಮಂತ್ರಿಗಳು ದರ್ಶನ್‌ಸಿಂಗ್‌ರಾಗಿ ಮತ್ತು ಇತರ ತೀವ್ರಗಾಮಿಗಳೊಂದಿಗೆ ಮಾತು ಕತೆ ನಡೆಸಲು ಒಬ್ಬ ಜೈನ ಮುನಿಗೆ ಒಪ್ಪಿಗೆ ನೀಡಿದ್ದರು. ಇಂತಹ ಕೃತ್ಯಗಳು ಬರ್ನಾಲಾ ಹಾಗೂ ಅವರ ನೇತೃತ್ವದ ಅಕಾಲಿದಳದ ಸ್ಥಾನಮಾನವನ್ನು ಮತ್ತಷ್ಟು ಶಿಥಿಲಗೊಳಿಸಿದವು. ರಾಜೀವ್ ಲೋಂಗೋವಾಲ್ ಒಪ್ಪಂದಕ್ಕೆ ಬದ್ಧವಾಗಿದ್ದುದಕ್ಕೆ, ರಾಷ್ಟ್ರವಿರೋಧಿ ಶಕ್ತಿಗಳನ್ನು ಹಿಮ್ಮೆಟ್ಟಿಸಿದ್ದುದಕ್ಕೆ,ಮುಖ್ಯಮಂತ್ರಿಗಳು ಪಡೆದ ಪ್ರತಿಫಲ ಇದೇ!

ಬರ್ನಾಲಾ ಸರ್ಕಾರ ಪಂಜಾಬಿನ ಗಂಭೀರ ಪರಿಸ್ಥಿತಿಯನ್ನು ಎದುರಿಸುವಲ್ಲಿ ತನ್ನ ಹೊಣೆಗಾರಿಕೆಗಳನ್ನೆಲ್ಲಾ ನಿಭಾಯಿಸಿದೆ ಎಂದು ಯಾರೂ ವಾದಿಸುತ್ತಿಲ್ಲ. ಆದರೆ ಹಾಗೆ ಅದು ತನ್ನ ಹೊಣೆಗಾರಿಕೆಗಳನ್ನು ತ್ವರಿತವಾಗಿ ಜ್ಯಾರಿಗೊಳಿಸುವ ಮೂಲಕ ಆ ಸರ್ಕಾರದ ರಾಜಕೀಯ ನಿಲುಮೆಯನ್ನು ಬಲಪಡಿಸುವುದೇ ಸರಿಯಾದ ಮಾರ್ಗವಾಗಿತ್ತು. ಸಾಮ್ರಾಜ್ಯಶಾಹೀ ಬೆಂಬಲಿತ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟದ ಮುಖ್ಯ ಅಂಗವೆಂದರೆ ಜನಸಾಮಾನ್ಯರನ್ನು ರಾಜಕೀಯವಾಗಿ ಸಕ್ರೀಯಗೊಳಿಸುವುದು. ಎಲ್ಲಾ ರಾಷ್ಟ್ರೀಯ ಪಕ್ಷಗಳ ಜಂಟೀ ಪ್ರಯತ್ನಗಳಿಂದಷ್ಟೆ ಇದು ಸಾಧ್ಯ. ಅಕಾಲೀ ದಳ (ಲೋಂಗೋವಾಲ)ಕ್ಕೆ ಇದರಲ್ಲೊಂದು ಮಹತ್ವದ ಪಾತ್ರವಿದೆ. ಈಗ ಸಂವಿಧಾನದ ಆರ್ಟಿಕಲ್ 356ನೇ ಕಲಮನ್ನು ಬಳಸಿ ಚುನಾಯಿತ ಸರ್ಕಾರವೊಂದನ್ನು ವಜಾ ಮಾಡಿ ಇಂತಹದೊಂದು ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸಿದ ಜವಾಬ್ದಾರಿಯನ್ನು ಕಾಂಗ್ರೆಸ್(ಐ) ಹೊರಬೇಕು.

ರಾಷ್ಟ್ರಪತಿ ಆಳ್ವಿಕೆ ಮತ್ತು ಬರ್ನಾಲಾ ಸರ್ಕಾರದ ವಜಾ ಪಂಜಾಬಿನಲ್ಲಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿ ಕೋಮು ಸೌಹಾರ್ದದ ಮೇಲೆ ಹಾನಿಕಾರ ಪರಿಣಾಮವುಂಟು ಮಾಡುತ್ತದೆ; ಸಿಖ್ ಜನ ಸಮೂಹಗಳನ್ನು ದೇಶದ ಇತರ ಜನತೆಯಿಂದ ದೂರ ಸೆಳೆಯುವಲ್ಲಿ ತೀವ್ರಗಾಮಿಗಳಿಗೆ ಇನ್ನೊಂದು ಅಸ್ತ್ರ ಒದಗಿಸುತ್ತದೆ.

ಪಂಜಾಬೀ ಜನತೆಯೀಗ ಸಾಮ್ರಾಜ್ಯ ಶಾಹಿ ಏಜೆಂಟ್ ವಿಚ್ಛಿದ್ರಕಾರೀ ಖಾಲಿಸ್ತಾನಿಗಳ ವಿರುದ್ಧ ತಾವು ನಡೆಸಿರುವ ತೀವ್ರ ಸೆಣಸಾಟದೊಂದಿಗೆ ಪ್ರಜಾಪ್ರಭುತ್ವದ ಮರು ಸ್ಥಾಪನೆಗಾಗಿಯೂ ಹೋರಾಡ ಬೇಕಾಗಿ ಬಂದಿದೆ. ಈ ಹೋರಾಟದಲ್ಲಿ ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ದೇಶಪ್ರೇಮಿ ಶಕ್ತಿಗಳಸಕ್ರೀಯ ಬೆಂಬಲ ಅವರಿಗೆ ಬೇಕಾಗಿದೆ. ಆಳುವ ಪಕ್ಷದ ಅನುಸರಿಸುವ ದಾರಿಯನ್ನು ಖಡಾಖಂಡಿತವಾಗಿ ವಿರೋಧಿಸಬೇಕು. ಅದನ್ನು ಸರಿಪಡಿಸಬೇಕು. ●

ಬೆಲೆ ಏರಿಕೆ ವಿರುದ್ಧ ರಾಜ್ಯವ್ಯಾಪಿ ಚಳುವಳಿಗೆ ಸಿ. ಪಿ. ಐ. (ಎಂ) ಸಿ. ಪಿ. ಐ. ಜಂಟಿ ಕರೆ

ಜನತಾ ಸರ್ಕಾರ ಇತ್ತೀಚೆಗೆ ವಿದ್ಯುತ್, ಹಾಲು, ಹೋಟೆಲ್‌ದರ ಏರಿಸಿದ್ದನ್ನು ಪ್ರತಿಭಟಿಸಿ ಭಾರತ ಕಮ್ಯುನಿಸ್ಟ್ ಪಕ್ಷಗಳ ಬೆಂಗಳೂರು ಜಿಲ್ಲಾ ಸಮಿತಿಗಳ ಜಂಟಿ ಕರೆಯಂತೆ ಮೇ 15ರಂದು ಬೆಳಿಗ್ಗೆ 10ಗಂಟೆಗೆ ಚಿಕ್ಕಲಾಲ್‌ಬಾಗ್ ನಿಂದ ಹೊರಟ ಬೃಹತ್ ರ್‍ಯಾಲಿ ಕಾವೇರಿ ಭವನದ ಕೆ.ಇ.ಬಿ. ಕಛೇರಿಯ ಮುಂದೆ ಸಾಮೂಹಿಕ ಧರಣಿ ನಡೆಸಿ ಅಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಧರಣಿ ಬಹಿರಂಗ ಸಭೆಯನ್ನುದ್ದೇಶಿಸಿ ಪ್ರಾರಂಭದಲ್ಲಿ ಸಿ.ಪಿ.ಐ.ನ ಜಿಲ್ಲಾ ಕಾರ್ಯದರ್ಶಿಗಳಾದ ಕಾ॥ ಎಂ.ಸಿ. ವೆಂಕಟರಾಮ್ ಸ್ವಾಗತಿಸಿದರು. ಕಾ॥ ಸೂರ್ಯನಾರಾಯಣ ರಾವ್ ಮಾತನಾಡಿ ಜನತಾ ಪಕ್ಷದ ಪ್ರಮುಖ ನಾಯಕರೇ ಬೆಲೆ ಏರಿಕೆಯನ್ನು ವಿರೋಧಿಸಿ ವಿಚಾರಗೋಷ್ಠಿ ನಡೆಸುತ್ತಿರುವುದನ್ನು ಹೆಗಡೆಯವರು ಗಣನೆಗೆ ತೆಗೆದುಕೊಳ್ಳದಿರುವುದು ಅವರ ಮೌಲ್ಯಾಧಾರಿತ ರಾಜಕಾರಣಕ್ಕೆ ಹಿಡಿದ ಕನ್ನಡಿ ಎಂದು ಟೀಕಿಸಿದರು. ಮಂಡಲ ಜಿಲ್ಲಾ ಪರಿಷತ್ ವಿಧಾನ ಸಭೆಯಲ್ಲಿ ಬಹುಮತವಿದೆ ಎಂದು ಜನರನ್ನು ಕಡೆಗಣಿಸಿದರೆ ಜನರು ಕಾಂಗ್ರೆಸ್‌ಗೆ ಕಲಿಸಿದ ಪಾಠವನ್ನೇ ಜನತಾ ಸರ್ಕಾರಕ್ಕೂ ಕಲಿಸುವ ದಿನಗಳು ಸಮೀಪಿಸುವುದೆಂದು ಎಚ್ಚರಿಸಿದರು. ಲೋಹಿಯಾ,ಗೋಪಾಲಗೌಡರ ಶಿಷ್ಯ, ಸಮಾಜವಾದಿ ಎಂದು ಹೇಳಿಕೊಂಡು ಮಂತ್ರಿಯಾಗಿರುವ ಸಚಿವ ಜೆ.ಎಚ್.ಪಟೇಲರು ಯಾರೋ ಕೆಲ ಜನರು ಪ್ರತಿಭಟಿಸಿದರೆ ಬೆಲೆ ಇಳಿಸಲು ಸಾಧ್ಯವಿಲ್ಲವೆಂದು ದರ್ಪದ ಮಾತನಾಡಿರುವುದನ್ನು ಖಂಡಿಸಿದರು. ರಾಜಕೀಯ ಉದ್ದೇಶದಿಂದ ಚಳುವಳಿ ನಡೆಸಲಾಗುತ್ತಿದೆ ಎಂದು ಆರೋಪ ಮಾಡುವ ಸಚಿವರು ಬೆಲೆ ಇಳಿಸುವ ತೀರ್ಮಾನ ಕೈಗೊಳ್ಳಲಿ ಎಂದು ಸವಾಲು ಹಾಕಿದರು. ಜನತಾ ಸರ್ಕಾರ ಮಾಡುವ ಜನ ವಿರೋಧಿ ನೀತಿಗಳಿಗೆಲ್ಲ ನಾವು ಬೆಂಬಲ ನೀಡುವುದಿಲ್ಲ ಎಂದು ಹೇಳಿ ಬೆಲೆ ಏರಿಕೆ ವಿರೋಧ ಚಳುವಳಿಯನ್ನು ತೀವ್ರಗೊಳಿಸಲು ಕರೆ ನೀಡಿದರು. ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಕಾ॥ ಎಂ. ಎಸ್. ಕೃಷ್ಣನ್ ಮಾತನಾಡಿ ಜನತಾ ಸರ್ಕಾರ ಆಶ್ವಾಸನೆ ಭರವಸೆಗಳಿಂದಲ್ಲೇ ಹೆಚ್ಚುದಿನ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲವೆಂದು ಎಚ್ಚರಿಸಿದರು. ರಾಜ್ಯ ಬಜೆಟ್ಟಿನಲ್ಲಿ ಬೆಲೆ ಏರಿಸುವ ಯಾವ ಸೂಚನೆಗಳನ್ನು ನೀಡದೆ ನಂತರ ಏರಿಸುವುದರ ಮೂಲಕ ಸದನ ಮತ್ತು ಜನತೆಗೆ ದ್ರೋಹ ಬಗೆದಿರುವುದನ್ನು ಖಂಡಿಸಿದರು.

ರಪ್ತು ಸಮಿತಿ, ಪವರ್ ಕಾರ್ಪೋರೇಷನ್ ಸಲಹಾ ಸಮಿತಿಗಳ ವರದಿ ಆಧಾರದಲ್ಲಿ ಬೆಲೆ ಏರಿಕೆ ಮಾಡಲಾಗಿದೆ ಎಂದು ವಿದ್ಯುತ್ ಇಲಾಖೆ ಅಧಿಕಾರಿಗಳು ನಿಯೋಗಕ್ಕೆ ತಿಳಿಸಿ ಬೆಲೆ ಇಳಿಸುವ ಕುರಿತು ಯಾವ ಭರವಸೆಯನ್ನೂ ನೀಡದ ಕಾರಣ ಸಿ.ಪಿ.ಐ. (ಎಂ), ಸಿ ಪಿ.ಐ.ಪಕ್ಷಗಳ ರಾಜ್ಯವ್ಯಾಪಿ ಜಂಟಿ ಚಳುವಳಿ ನ[illegible] ಕರೆ ನೀಡಲಾಯಿತು. ●

ನಿಕರಾಗುವಾ ಹೋರಾಟಕ್ಕೆ ಅಮೇರಿಕನ್ನರ ಬೆಂಬಲ

ವಾಷಿಂಗ್‌ಟನ್‌ನ ರಾಜಧಾನಿಯಲ್ಲಿ 1.5ಲಕ್ಷ ಅಮೇರಿಕನ್ನರು ನಿಕರಾಗುವಾದ ವಿರುದ್ಧ ಯುದ್ಧ ಸಾರಿರುವ ಅಮೇರಿಕಾವನ್ನು ಖಂಡಿಸಿ ತತ್‌ಕ್ಷಣವೇ ಯುದ್ಧಕ್ಕೆ ಕೊನೆಹಾಡುವಂತೆ ಮನವಿ ಮಾಡಿದರಲ್ಲದೆ ವರ್ಣಭೇದಕ್ಕೆ ವೈಟ್ ಹೌಸ್ ನೀಡುತ್ತಿರುವ ಬೆಂಬಲವನ್ನು ಅತ್ಯುಚ್ಚವಾಗಿ ಖಂಡಿಸಿದರು.

ವಿಯೆಟ್ನಾಂನ ಪರವಾಗಿ ನಡೆದ ಮೆರವಣಿಗೆಯ ನಂತರ ಇದೇ ಅತಿ ದೊಡ್ಡ ಮೆರವಣಿಗೆ ಎಂದು ಸಂಚಾಲಕರು ಅಭಿಪ್ರಾಯ ಪಟ್ಟರು. ಅದೇ ಸಮಯದಲ್ಲಿ ಸ್ಯಾನ್‌ಫ್ರಾನ್‌ಸಿಸ್ಕೋನಲ್ಲಿ ನಡೆದ ಮತ್ತೊಂದು ಮೆರವಣಿಗೆಯಲ್ಲಿ 40ಸಾವಿರ ಜನರು ಭಾಗವಹಿಸಿದ್ದರು.

'ಹಿಟ್ಲರನ ವಿರುದ್ಧ ಸಮರ ಸಾರುವಂತೆ ನಮ್ಮನ್ನು ಪ್ರಚೋದಿಸಿದ ಕಾರಣಗಳೇ ಇಂದು ಬೋಥಾ ಮತ್ತು ರೀಗನ್‌ವಿರುದ್ಧವೂ ಸಮರ ಸಾರುವಂತೆ ಮಾಡಿವೆ' ಎಂದು ಕಪ್ಪು ಜನರ ಪ್ರತಿನಿಧಿ ಜೆಸ್ ಜ್ಯಾಕ್‌ಸನ್ ತುಂಬು ಸಭೆಯಲ್ಲಿ ಮಾತನಾಡಿ 'ನಿಕರಾಗುವಾ ಸ್ವಾತಂತ್ರವಾಗಲು ಎಲ್ಲಾ ರೀತಿ ಬೆಂಬಲ ನೀಡಲು ನಾವು ಸಿದ್ಧ' ಎಂದು ಹೇಳಿದರು.

ಶಾಂತಿಗಾಗಿ ಬ್ರಿಟಿಷರ ಮೆರವಣಿಗೆ

ಇತ್ತೀಚೆಗೆ ಇಂಗ್ಲೆಂಡ್ ಕಂಡ ಮೆರವಣಿಗೆಗಳಲ್ಲಿ ಈ ಶಾಂತಿ ಮೆರವಣಿಗೆ 'ಅತ್ಯದ್ಭುತ'ಎಂದು ವರ್ಣಿಸಲಾದವು. ಅಣ್ವಸ್ತ್ರಮುಕ್ತ ವಿಶ್ವಕ್ಕಾಗಿ ಒಂದು ಲಕ್ಷ ಜನರು ಮೆರವಣಿಗೆ ನಡೆಸಿದರು.

ಬ್ರಿಟನ್‌ನಿಂದ ಅಣ್ವಸ್ತ್ರಗಳನ್ನು ಒದ್ದೋಡಿಸುವುದೇ ಅಲ್ಲದೆ ಸೋವಿಯತ್ ರಷ್ಯದ ನಿಶಸ್ತ್ರೀಕರಣದ ಸೂಚನೆಗಳನ್ನು ಒಪ್ಪುವಂತೆ ಕರೆ ನೀಡಿತು. ಹೈಡ್ ಪಾರ್ಕಿನಲ್ಲಿ ನಡೆ[illegible] ಮಾತನಾಡಿದ ಅಣ[illegible] ಪಾಲ್ ಜಾನ್ಸ್, ನಾ[illegible] 'ತಕ್ಷಣವೇ ರಷ್ಯ[illegible] ಒಪ್ಪಿ ರಾಜಕೀಯ[illegible] ಣರಾಗಿರಿ' ಎ[illegible] ಕಮ್ಯುನಿಸ್ಟ್[illegible] ಕರ್ತರು ಬೃಹತ್ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ○

ಸಖಾವು ಕೃಷ್ಣ ಪಿಳ್ಳೆಯವರ ಪ್ರೇಮ ವಿವಾಹ

ಅಕ್ಟೋಬರ್ 7ನೆಯ ತಾರೀಖು. ತಂಗಮ್ಮ ಎಂಬ ಹುಡುಗಿ ತನ್ನ ಗೆಳತಿಯರ ಜೊತೆ ನಡೆಯುತ್ತ ಹಿಂದಿ ಶಾಲೆಯ ಕಡೆಗೆ ಹೊರಟ್ಟಿದ್ದಳು. ಇದ್ದಕ್ಕಿದ್ದ ಹಾಗೆ ಅಯ್ಯನ್ ಪಿಳ್ಳೆ ಅವರ ಮುಂದೆ ಪ್ರತ್ಯಕ್ಷನಾದ.

“ನಮಸ್ಕಾರ” ಅಯ್ಯನ್ ಪಿಳ್ಳೆ ಗೌರವಪೂರ್ವಕವಾಗಿ ಅಂಗಲಾಚುವವರಂತೆ ಹೇಳಿದ.

“ಏನು? ” ಆಶ್ಚರ್ಯಚಕಿತಳಾಗಿ ತಂಗಮ್ಮ ಕೇಳಿದಳು.

“ಒಂದೆರಡು ಹಿಂದಿ ಪುಸ್ತಕಗಳನ್ನು ಕೊಡುವಿರಾ ?” ಆತನ ಕೋರಿಕೆ ಸರಳವಾಗಿತ್ತು, ನೇರವಾಗಿತ್ತು, ಆದರೆ ಅಷ್ಟೇ ಅಸಾಮಾನ್ಯವಾದುದಾಗಿತ್ತು.

ಚಕಿತಳಾದ ತಂಗಮ್ಮನಿಗೆ ಆ ಘಳಿಗೆಯಲ್ಲಿ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಅವಳ ಕೈಯಲ್ಲಿದ್ದ ಪುಸ್ತಕದ ಚೀಲದಲ್ಲಿ ಒಂದೆರಡು ಹಿಂದೀ ಪುಸ್ತಕಗಳಿದ್ದುವು. “ಚಂದ್ರಗುಪ್ತ” ಎಂಬ ನಾಟಕದ ಪ್ರತಿಯೂ ಅವುಗಳ ಮಧ್ಯೆ ಇದ್ದಿತು. ತಂಗಮ್ಮ ಅದನ್ನೇ ಅಯ್ಯನ್ ಪಿಳ್ಳೆಯ ಕೈಗೆ ಕೊಟ್ಟಳು. ಅವನಿಗೇಕೆ ಪುಸ್ತಕ ಬೇಕಿತ್ತೆಂಬುದನ್ನು ಕೇಳುವುದು ಕೂಡ ಆಕೆಗೆ ಮರೆತು ಹೋಯಿತು.

ಶಾಲೆಯಿಂದ ವಾಪಸ್ ಮನೆಯ ಕಡೆಗೆ ಹೋಗುತ್ತಿದ್ದಾಗ ರಸ್ತೆಯ ಕ್ರಾಸಿಂಗ್ ಬಳಿ ಅಯ್ಯನ್ ಪಿಳ್ಳೆ ನಿಂತಿದ್ದು ಕಾಣಿಸಿತು. ಈಗ ಅವಳಿಗೆ ನೆನಪಾಯಿತು. “ಪುಸ್ತಕ ಏಕೆ ಬೇಕಾಗಿತ್ತು ?” ಆಕೆ ಅಯ್ಯನ್ ಪಿಳ್ಳೆಯನ್ನು ಹತ್ತಿರ ಕರೆದು ಕೇಳಿದಳು.

“ಎಡಲಕುಡಿ ಜೈಲಿನಲ್ಲಿ ಒಬ್ಬ ಕಾಂಗ್ರೆಸ್ಸಿಗರಿದ್ದಾರೆ. ಅವರಿಗೆ ಓದಲು ಬೇಕಾಗಿತ್ತು,” ಅಯ್ಯನ್ ಪಿಳ್ಳೆ ಸ್ಪಷ್ಟವಾಗಿಯೇ ಹೇಳಿದ.

ಸಖಾವ್ ಕೃಷ್ಣ ಪಿಳ್ಳೆಯ ಬಗ್ಗೆ “ಕಮ್ಯೂನಿಸ್ಟ್”ಎಂಬ ಪದವನ್ನು ಬಳಸದೆ ಆತ “ಕಾಂಗ್ರೆಸ್ಸಿಗ” ಎಂಬ ಪದವನ್ನು ಬಳಸಿದ. ನಿಜವಾದ ಪ್ರಗತಿಶೀಲ ಕಾಂಗ್ರೆಸ್ಸಿಗರು ಕೂಡ ಸಾಮಂತ ಮತ್ತು ಸಾಮ್ರಾಜ್ಯಶಾಹಿ ಪ್ರಭುತ್ವಗಳ ವಿರುದ್ಧ ಉಗ್ರ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿದ್ದರು. ಅಂತಲೇ “ಕಾಂಗ್ರೆಸ್ಸಿಗ” ಎಂಬ ಪದ ಕೇಳಿದಾಗ ಆಕೆಯ ಮೈಯಲ್ಲಿ ಒಂದು ಥರಾ ನಡುಕ ಉಂಟಾಯಿತು. ಅದೂ ಆತ ಜೈಲಿನಲ್ಲಿರುವ “ಕಾಂಗ್ರೆಸ್ಸಿಗನ”ಮಾತನ್ನು ಆತ ಹೇಳಿದ್ದ. ಆಕೆಯ ತಾಯಿ ತಂದೆ ದೈವಾರಾಧಕರು: ಸಂಪ್ರದಾಯಸ್ತ ಕುಟುಂಬದವರು. ಅಂಥವರ ಮನೆಯಲ್ಲಿ ಹೆಣ್ಣು ಮಕ್ಕಳು ಶಾಲೆ ಕಲಿಯುವುದಕ್ಕೂ ಹಿಂದು ಮುಂದೆ ನೋಡಬೇಕಾಗಿತ್ತು. ತಂಗಮ್ಮ ಒಂದೆರಡು ಮೈಲು ದೂರದಲ್ಲಿದ್ದ ಹಿಂದಿ ಶಾಲೆಗೆ ನಡೆಯುತ್ತ ಹೋಗುವುದನ್ನೇ ಜನ ಸಹಿಸುತ್ತಿರಲ್ಲಿಲ್ಲ. ಆಕೆಯ ಕಡೆಗೆ ದುರುಗುಟ್ಟಿ ನೋಡುತ್ತಿದ್ದರು. “ಹೆಂಗಸರು ಕೂಡ ಶಾಲೆಗೆ ಹೋಗುತ್ತಿದ್ದಾರೆ. ಕೇಡುಗಾಲ ಬಂತು” ಎಂದು ಜನ ತಮ್ಮ ತಮ್ಮೊಳಗೇ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಹೆಣ್ಣು ಮನೆಯ ನಾಲ್ಕು ಗೋಡೆಗಳಲ್ಲೇ ಇರಬೇಕು, ಹೊಸ್ತಿಲು ದಾಟಿಹೋಗುವುದು ಪಾಪ ! ಗುಡಿ ಗುಂಡಾರಗಳಿಗೆ ಮಾತ್ರ ಹೋಗಬೇಕು. ಹಾಗೆ ಹೋಗುವುದಿದ್ದರೂ ಜೊತೆಗೆ ಅಣ್ಣತಮ್ಮಂದಿರನ್ನೊ ಅಥವಾ ಮನೆಯಲ್ಲಿನ ಬೇರೆ ಯಾರಾದರೂ ಗಂಡಸರನ್ನೊ ಕರೆದುಕೊಂಡು ಹೋಗಬೇಕು ಎಂಬ ಭಾವನೆ ಜನರಲ್ಲಿದ್ದಿತು. ಅಯ್ಯನ್ ಪಿಳ್ಳೆಯ ಉತ್ತರ ಆಕೆಯನ್ನು ಗೊಂದಲಕ್ಕೆ ಸಿಕ್ಕಿಸಿತು. ಅದೇ ಗೊಂದಲದಲ್ಲೇ ಮನೆಗೆ ಹೋದ ಅವಳಿಗೆ ದಾರಿ ತುಳಿದು ಬಂದದ್ದೇ ಗೊತ್ತಾಗಲ್ಲಿಲ್ಲ.

ಐದು ದಿನಗಳ ತರುವಾಯ ಅಯ್ಯನ್ ಪಿಳ್ಳೆ ಪುಸ್ತಕದ ಸಮೇತ ಆಕೆಯನ್ನು ಪುನಃ ಭೇಟಿಯಾದ. ಪುಸ್ತಕವನ್ನು ಆಕೆಯ ಕೈಗೆ ಕೊಟ್ಟ. “ಆಪ್ ಕಾ ನಾಮ್ ಕ್ಯಾ ಹೈ ?” ಎಂದು ಆ ಪುಸ್ತಕದ ಹೊದಿಕೆಯ ಮೇಲೆ ಸುಂದರವಾದ ಕೈ ಬರೆಹದಲ್ಲಿ ಬರೆದಿದ್ದ ಪ್ರಶ್ನೆ ಆಕೆಯನ್ನು ನುಂಗುವಂತೆ ನೋಡುತ್ತಿರುವ ಹಾಗೆ ಭಾಸವಾಯಿತು.

ಮತ್ತೆ ಒಂದು ದಿನ ಅಯ್ಯನ್ ಪಿಳ್ಳೆ ತಂಗಮ್ಮಳ ಬಳಿ ಬಂದು ಹೇಳಿದ “ಇನ್ನೊಂದೆರಡು ಹಿಂದೀ ಪುಸ್ತಕಗಳನ್ನು ಕೊಡುತ್ತೀರಾ ?”

ಈ ಬಾರಿ ತಂಗಮ್ಮಳ ಮನಸ್ಸಿನಲ್ಲಿ ವಿಚಾರಗಳ ಒಂದು ದೊಡ್ಡ ಘರ್ಷಣೆಯೇ ನಡೆಯಿತು. “ಯಾರಿಗಾದರೂ ಈ ವಿಷಯ ಗೊತ್ತಾದರೆ ನನ್ನ ಗತಿ ಏನು ?” ಎಂದು ಆಲೋಚಿಸಿದ ಆಕೆ, “ಗೊತ್ತಾದರೆ ಏನು ಮಾಡುತ್ತಾರೊ ಮಾಡಲಿ. ದೇಶಕ್ಕಾಗಿ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುತ್ತಿರುವ ಒಬ್ಬ ಕೈದಿಗೆ ಹಿಂದೀ ಪುಸ್ತಕಗಳನ್ನು ಓದಲಿಕ್ಕೂ ಕೊಡದಂಥ ಹೇಡಿ ನಾನಾಗಬಾರದು,” ಎಂದು ಒಂದು ದೃಢ ನಿರ್ಧಾರಕ್ಕೆ ಬಂದಳು.

ಆಕೆ ಇನ್ನೊಂದು ಪುಸ್ತಕವನ್ನು ತೆಗೆದುಕೊಂಡು ಅದರ ಹೊದಿಕೆಯ ಮೇಲೆ, “ತಂಗಮ್ಮಾ, ಮೇರಾ ನಾಮ್ ಹೈ” ಎಂದು ಬರೆದಳು.

“ಇದೊ, ಆ ಮಹಾಶಯರಿಗೆ ಇದನ್ನು ಕೊಡು,” ತಂಗಮ್ಮ ಪುಸ್ತಕವನ್ನು ಅಯ್ಯನ್ ಪಿಳ್ಳೆಯ ಕೈಯಲ್ಲಿ ಕೊಟ್ಟಳು.

ಅಯ್ಯನ್ ಪಿಳ್ಳೆ ಅದನ್ನು ಸಖಾವ್ ಕೃಷ್ಣ ಪಿಳ್ಳೆಯವರಿಗೆ ತಲುಪಿಸಿದ.

ಎರಡನೆಯ ಸಲ ಅಯ್ಯನ್ ಪಿಳ್ಳೆ ಪುಸ್ತಕವನ್ನು ವಾಪಸ್ ತಂದು ಕೊಟ್ಟಾಗ ಕೃಷ್ಣ ಪಿಳ್ಳೆಯವರ ಹಿಂದಿ ಭಾಷೆಯಲ್ಲಿ ಬರೆದಿದ್ದ ಒಂದು ಚೀಟಿಯನ್ನು ತಂಗಮ್ಮಾ ಅದರಲ್ಲಿ ಕಂಡಳು. ಯಾರೂ ಇಲ್ಲದ ಸ್ಥಳದಲ್ಲಿ ಅದನ್ನು ಬಿಚ್ಚಿ ಓದಿದಳು. ಎಲ್ಲ ರಾಜಕಾರಣದ ವಿಷಯ. “ಕೃಷ್ಣ ಪಿಳ್ಳೆ” ಎಂಬ ಹೆಸರನ್ನು ಬಿಟ್ಟರೆ ಆಕೆಗೆ ಏನೂ ಅರ್ಥವಾಗಲಿಲ್ಲ. ಜೈಲಿಗೆ ಸಾಗಿಸಿದ ಮತ್ತೊಂದು ಪುಸ್ತಕದಲ್ಲಿ ಆಕೆ ತನಗೆ ರಾಜಕಾರಣದ ವಿಷಯ ತಿಳಿಯದೆಂದು ಬರೆದು ಕಳಿಸಿದಳು.ಕೃಷ್ಣ ಪಿಳ್ಳೆ ಸುಮ್ಮನೆ ಬಿಡಲಿಲ್ಲ. ವಿಷಯಗಳನ್ನು ಒಂದೊಂದಾಗಿ ಆಕೆಗೆ ತಿಳಿಸತೊಡಗಿದರು. ಹೊರಗಿನವರಿಗೆ ತಾನು ಆಕೆಗೆ ತಿಳಿಸುತ್ತಿದ್ದ ವಿಷಯ ಗೊತ್ತಾಗದಿರಲೆಂದು ಹಿಂದೀ ಭಾಷೆಯಲ್ಲೇ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಕ್ರಮೇಣ ತಂಗಮ್ಮಳಲ್ಲಿ ರಾಜಕೀಯ ಪ್ರಜ್ಞೆ ಮೂಡತೊಡಗಿತು. ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆ, ಸರ್. ಸಿ.ಪಿ. ರಾಮಸ್ವಾಮಿಯ ದಬ್ಬಾಳಿಕೆ, ಜನತೆಯ ಬಗ್ಗೆ ನಿಜವಾದ ಕಳಕಳಿಯುಳ್ಳ ಜವಾಬ್ದಾರಿಯುತ ಸರ್ಕಾರಕ್ಕಾಗಿ ಹೋರಾಟ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ನಡೆಸುತ್ತಿದ್ದ ಶೋಷಣೆ.... ಎಲ್ಲ ವಿಷಯಗಳೂ ಆಕೆಗೆ ಅರ್ಥವಾಗತೊಡಗಿದವು. ಯಾವ ಟಿಪ್ಪಣಿಗಳಲ್ಲೂ ಪ್ರೇಮ ಪ್ರಣಯಗಳ ವಿಷಯವಿರುತ್ತಿರಲಿಲ್ಲ.

ಜೈಲಿನ ಹೊರಗಿನ ಜಗತ್ತಿನ್ನೊಂದಿಗೆ ನಿರಂತರ ಸಂಪರ್ಕ ಬೆಳೆಸಲು ತಂಗಮ್ಮಾ ಕೃಷ್ಣ ಪಿಳ್ಳೆಯವರಿಗೆ ತುಂಬ ನೆರವಾಗತೊಡಗಿದಳು. ಸಖಾವ್ ಗಂಭೀರವಾದ ವಿಷಯಗಳನ್ನು ಬರೆದು ಮಲಯಾಳವ್ ಭಾಷೆಗೆ ಅನುವಾದ ಮಾಡಲು ತಿಳಿಸಿದ.“ಅವರೇ ಇದನ್ನು ಮಳೆಯಾಳ ಭಾಷೆಯಲ್ಲಿ ಏಕೆ ಬರೆದು ಕಳಿಸಬಾರದು ?” ತಂಗಮ್ಮಾಗೆ ಸೋಜಿಗ. ಆದರೆ ಬೇಹುಗಾರರ ಕಣ್ಣಿಗೆ ಅದು ಬೀಳದಿರಲೆಂದು ಸಖಾವ್ ಹಿಂದೀ ಭಾಷೆಯಲ್ಲೇ ಬರೆದು ಕಳಿಸುತ್ತಿದ್ದುದು ಆಕೆಗೆ ತಿಳಿದಿರಲಿಲ್ಲ. ತಂಗಮ್ಮ ತನ್ನ ದುಡ್ಡಿನಲ್ಲೇ ಹಾಳೆಗಳನ್ನು ಕೊಂಡು ಅವುಗಳನ್ನು ಮಲಯಾಳಮ್ ಭಾಷೆಗೆ ಅನುವಾದ ಮಾಡಿಕೊಡಲಾರಂಭಿಸಿದಳು.

“ಆಪ್ ಕಾ ನಾಮ್ ಕ್ಯಾ ಹೈ ?” ಎಂದು ಆ ಪುಸ್ತಕದ ಹೊದಿಕೆಯ ಮೇಲೆ ಸುಂದರವಾದ ಕೈಬರೆಹದಲ್ಲಿ ಬರೆದಿದ್ದ ಪ್ರಶ್ನೆ ಆಕೆಯನ್ನು ನುಂಗುವಂತೆ ನೋಡುತ್ತಿರುವ ಹಾಗೇ ಭಾಸವಾಯಿತು.

ಒಂದು ದಿನ ತಂಗಮ್ಮಾಗೆ ತಿಳಿಸಿದ್ದ ರಹಸ್ಯ ಪತ್ರದಲ್ಲಿ ಕೃಷ್ಣ ಪಿಳ್ಳೆಯವರು ಆರ್ಯ ಪಲ್ಲೋಮ್ ಅವರ ಮಗಳು ದೇವಕಿ, ಚೆಂಗನಚೆರಿಯ ಕುಲತುಂಗಾಲ್ ಪೊತೆನ್, ಮಾಥೂರ್ ಥಾನು ಪಿಳ್ಳೆ ಮೊದಲಾದವರ ವಿಳಾಸಗಳನ್ನು ತಿಳಿಸಿ ಅವರನ್ನು ಭೇಟಿಯಾಗಿ ಬರಲು ಹೇಳಿದರು.

ಮಾಥೂರ್ ಥಾನು ಪಿಳ್ಳೆ ರಾಜ್ಯ ಕಾಂಗ್ರೆಸ್ಸಿನ ಒಬ್ಬ ಪ್ರಗತಿಶೀಲ ಧುರೀಣರು ಸಮೀಪದ ತಿರುವತ್ತೂರಿನಲ್ಲಿ ಇರುತ್ತಿದ್ದರು. ತಂಗಮ್ಮಾಳನ್ನು ಥಾನು ಪಿಳ್ಳೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ತಂಗಮ್ಮಾಗೆ ಕೆಲವು ಪುಸ್ತಕಗಳನ್ನು ಮತ್ತು ಹಸ್ತಪ್ರತಿಗಳನ್ನು ಕೊಟ್ಟು ಕಳಿಸಿದರು. ಪುನಃ ಬಂದುಕಾಣುವುದಾಗಿ ಹೇಳಿತಂಗಮ್ಮಾ ಹೊರಟು ಬಂದಳು.

ಮಾರನೆಯ ವಾರ ತಂಗಮ್ಮಾ ಥಾನುಪಿಳ್ಳೆಯವರಮನೆಗೆ ಹೋದಳು. ಥಾನು ಪಿಳ್ಳೆ ಮನೆಯಲ್ಲಿರಲಿಲ್ಲ. ಅವರು ಬರುವವರೆಗೂ ದಾರಿ ಕಾಯುತ್ತಾ ಕುಳಿತಳು. ಥಾನು ಪಿಳ್ಳೆ ಬಂದರು. ಆದರೆ ತಂಗಮ್ಮಾಳನ್ನು ಕಂಡು ಸಿಟ್ಟಿಗೆದ್ದರು. ಸ್ವಲ್ಪ ಒರಟಾಗಿಯೇ ಮಾತನಾಡಿದರು. ತಂಗಮ್ಮಾಗೆ ಬೇಸರವಾಯಿತು.

ಕೃಷ್ಣ ಪಿಳ್ಳೆಯವರಿಗೆ ಈ ವಿಷಯವನ್ನು ಬರೆದು ತಿಳಿಸಿದಳು. ಆಕೆಯನ್ನು ಒಬ್ಬ ಸಿ.ಐ.ಡಿ. ಏಜೆಂಟ್ ಇರಬೇಕೆಂದು ಥಾನು ಪಿಳ್ಳೆ ಭಾವಿಸಿದ್ದರೆಂದು ಕೃಷ್ಣ ಪಿಳ್ಳೆ ತಿಳಿಸಿದಾಗಲೇ ಆಕೆಗೆ ಸಮಾಧಾನವಾಯಿತು.

ಕ್ರಮೇಣ ಕೃಷ್ಣ ಪಿಳ್ಳೆಯವರ ರಾಜಕೀಯ ಟಿಪ್ಪಣಿಗಳು ದೊಡ್ಡವಾಗತೊಡಗಿದವು. ತಂಗಮ್ಮ ಹಾಳೆಗಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಯಿತು. ಅವುಗಳನ್ನು ಸರಿಯಾದ ಸ್ಥಳಗಳಿಗೆ ತಲುಪಿಸಲು ಅಯ್ಯನ್ ಪಿಳ್ಳೆಗೂ ಹಣ ಕೊಡಬೇಕಾಯಿತು ನಾಲ್ಕು ಮಕ್ಕಳಿಗೆ ಹಿಂದೀ ಪಾಠ ಹೇಳಿ ಅವರಿಂದ ಬರುತ್ತಿದ್ದ ಹಣದಲ್ಲಿ ತಂಗಮ್ಮ ಖರ್ಚನ್ನು ನಿಭಾಯಿಸತೊಡಗಿದಳು. ಆಗುವ ಖರ್ಚಿನ ಲೆಕ್ಕವಿಡಬೇಕೆಂದೂ, ಅದನ್ನು ಪಕ್ಷದಿಂದ ಕೊಡಿಸಲಾಗುವುದೆಂದೂ, ಕೃಷ್ಣ ಪಿಳ್ಳೆ ಆಕೆಗೆ ತಿಳಿಸಿದರು.

ಈ ಮಧ್ಯೆ ಮೊರಾಳ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆ. ಪಿ. ಆರ್. ಗೋಪಾಲನ್ ಅವರಿಗೆ ಮರಣದಂಡನೆ ನೀಡುವ ತೀರ್ಪು ಕೃಷ್ಣ ಪಿಳ್ಳೆಯವರಿಗೆ ಗೊತ್ತಾಯಿತು. ಒಬ್ಬ ಆಪ್ತ ಸಂಗಾತಿಯ ಮೇಲೆ ಪೊಲೀಸರು ನಡೆಸುತ್ತಿದ್ದು ಘೋರ ಕೃತ್ಯದ ವಿಷಯ ತಿಳಿಯುತ್ತಲೇ ಅವರ ರಕ್ತ ಕುದಿಯತೊಡಗಿತು. ಮನ ನೊಂದಿತು. ಊಟ ನಿದ್ದೆ ಕೂಡ ಮಾಡಲಾಗಲಿಲ್ಲ. ಆ ವಿಷಯವಾಗಿ ಸಖಾವ್ ಆರು ಪುಟಗಳಷ್ಟು ದೀರ್ಘ ಪತ್ರವನ್ನು ಬರೆದು ತಂಗಮ್ಮಾಗೆ ತಲುಪಿಸಿದರು.

“ನಾನು ಊಟ ಮಾಡಿಲ್ಲ. ನಿದ್ದೆ ಮಾಡಿಲ್ಲ. ನನ್ನ ಒಬ್ಬ ಸಂಗಾತಿಗೆ ಮರಣ ದಂಡನೆ ಕೊಡುವ ತೀರ್ಪನ್ನು ಕೈಗೊಂಡಿದ್ದಾರೆ. ಆತನೇನು ಕೊಲೆಗಡುಕನೆ ? ಮರ್ದಿತ ಜನರಿಗಾಗಿ ಆತ ಹೋರಾಡಿದ್ದಾನೆ. ಜನತೆಯ ಹಕ್ಕುಗಳಿಗಾಗಿ ಎಷ್ಟೋ ಮತಪ್ರದರ್ಶನಗಳು, ಹೋರಾಟಗಳು ನಡಿದಿವೆ. ಯುದ್ಧದ ವಿರುದ್ಧ ಮತ್ತು ವಿದೇಶಿ ಪ್ರಭುತ್ವದ ವಿರುದ್ಧ ಜನರ ಮತಪ್ರದರ್ಶನಗಳು ಇನ್ನೂ ನಡೆಯುತ್ತಲೇ ಇವೆ. ಕೆಲವು ಕಡೆ ಜನರು ಪೊಲೀಸರನ್ನು ಎದುರಿಸಿ ಸೆಣಸಾಡಿದ್ದಾರೆ. ಇಂಥ ಒಂದು ಘರ್ಷಣೆ ಮೊರಾಳದಲ್ಲೂ ನಡೆದಿತ್ತು. ಅಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಸತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ಗಲ್ಲುಶಿಕ್ಷೆಯ ಕರಾಳ ಛಾಯೆ ಮೇಲೆದ್ದಿದೆ,” ಕೃಷ್ಣ ಪಿಳ್ಳೆ ಬರೆದರು.

ಆ ಪತ್ರದಲ್ಲಿ ಕೃಷ್ಣ ಪಿಳ್ಳೆಯವರು ಮಲಬಾರಿನಲ್ಲಿಯ ಕಮ್ಯೂನಿಸ್ಟ್ ಚಳವಳಿಯ ಕುರಿತು ಸಂಕ್ಷಿಪ್ತದಲ್ಲಿ ತಿಳಿಸಿದ್ದರು ಜೈಲುವಾಸ, ಗಲ್ಲು ಶಿಕ್ಷೆ ಮೊದಲಾದ ಘೋರ ಕೃತ್ಯಗಳು ನಡೆಯುತ್ತಿದ್ದರೂ ಕಮ್ಯೂನಿಸ್ಟ್ ಚಳವಳಿ ದೃಢವಾಗಿ ಮುಂದುವರಿದಿತ್ತು. ಇ. ಎಂ. ಎಸ್. ನಂಬೂದರಿಪಾಡ್ ಭೂಗತ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದ್ದರು. ಎ. ಕೆ. ಗೋಪಾಲನ್‌ಸೇಲಮ್ ಜೈಲಿನಿಂದ ಪರಾರಿಯಾಗಿದ್ದರು. ಅವರ ಬಗ್ಗೆ ಕೃಷ್ಣ ಪಿಳ್ಳೆ ತಂಗಮ್ಮಾಗೆ ತಿಳಿಸಿದ್ದರು. ತಂಗಮ್ಮಾ ಅವರನ್ನು ರಹಸ್ಯ ಸ್ಥಳಗಳಲ್ಲಿ ಭೇಟಿಯಾಗಬೇಕಾಗಿತ್ತು. ಅವರನ್ನೆಲ್ಲ ಗುರುತಿಸಲು ತಂಗಮ್ಮಾಗೆ ಕಷ್ಟವಾಗಲಿಲ್ಲ.

1942ರ ಜನವರಿ ತಿಂಗಳು ಕೃಷ್ಣ ಪಿಳ್ಳೆಯವರೊಡನೆ ರಹಸ್ಯ ಪತ್ರ ವ್ಯವಹಾರ ಆರಂಭವಾಗಿ ಮೂರು ತಿಂಗಳಾಗಿದ್ದರೂ ತಂಗಮ್ಮಾಗೆ ಅವರಿಂದ ರಾಜಕೀಯ ವಿಷಯವನ್ನು ಬಿಟ್ಟರೆ ವೈಯಕ್ತಿಕ ಆಸಕ್ತಿಯ ಯಾವ ಸೂಚನೆಗಳೂ ಬಂದಿರಲಿಲ್ಲ. ತಂಗಮ್ಮಾಳ ಕಾರ್ಯ ಚಟುವಟಿಕೆಗಳ ಬಗ್ಗೆ ಗೂಢಚಾರರಿಗೆ ಸುಳಿವು ಸಿಕ್ಕು ಗೋಪ್ಯವಾಗಿ ಅವಳ ಮೇಲೆ ನಿಗಾ ಇಡಲಾರಂಭಿಸಿದ್ದರು.

ಒಂದು ದಿನ ಒಬ್ಬ ಜೋತಿಷ್ಯಕಾರ ಹಿಂದಿ ಶಾಲೆಯ ಬಳಿ ಬಂದು ಹುಡುಗಿಯರನ್ನು ಹತ್ತಿರ ಕರೆದ. ತಂಗಮ್ಮಾಳ ಗೆಳತಿಯರು ಜ್ಯೋತಿಷ್ಯ ಕೇಳಲು ಅವನ ಬಳಿ ಓಡಿ ಹೋದರು. ಜ್ಯೋತಿಷ್ಯಕಾರ ಕೆಲವರು ಹುಡುಗಿಯರ ಭವಿಷ್ಯ ಹೇಳಿದ. “ನಾನೂ ಭವಿಷ್ಯ ಕೇಳಲೇ ?” ತಂಗಮ್ಮಾ ತನ್ನನ್ನು ತಾನೇ ಪ್ರಶ್ನಿಸಿಕೊಂಡಳು. “ಛೆ, ಅಂಗೈಯಲ್ಲಿನ ಗೆರೆಗಳಿಂದ ಭವಿಷ್ಯ ಎಂದಾದರೂ ತಿಳಿದೀತೆ ?” ಎಂಬ ಅನುಮಾನ ಉಂಟಾಯಿತು.

“ಬಾ ಅಮ್ಮಾ. ಎಲ್ಲಿ ನಿನ್ನ ಕೈ ನೋಡೋಣ.” ಜ್ಯೋತಿಷ್ಯಕಾರ ತಂಗಮ್ಮಾಳನ್ನೂ ಕೂಗಿ ಕರೆದ.

ತಂಗಮ್ಮಾ ಬೇಡದ ಮನಸ್ಸಿನಿಂದಲೇ ಬಂದು ಆತನ ಕಡೆಗೆ ತನ್ನ ಕೈಚಾಚಿದಳು. ಆ ವ್ಯಕ್ತಿ ಒಮ್ಮೆ ಅವಳ ಅಂಗೈಯಲ್ಲಿನ ಗೆರೆಗಳನ್ನು ಅವಳ ಮುಖವನ್ನೂ ದಿಟ್ಟಿಸಿನೋಡಿದ

“ಎಂಥ ಅದ್ಭುತವಾದ ಗೆರೆಗಳು” ಜ್ಯೋತಿಷ್ಯಕಾರ ಹೇಳಿದ.

ಈಗ ತಂಗಮ್ಮಾಳ ಆಸಕ್ತಿ ಹೆಚ್ಚಿತು ಲಕ್ಷ್ಯಕೊಟ್ಟು ಆತ ಹೇಳುವುದನ್ನೇ ಆಲಿಸತೊಡಗಿದಳು.

ಅವಳ ಕುಟುಂಬದ ಹಿನ್ನೆಲೆ, ಅವಳ ತಾಯಿ ತಂದೆಗಳ ಸ್ಥಿತಿಗತಿ, ಅವಳ ವಿದ್ಯಾಭ್ಯಾಸ ಎಲ್ಲದರ ಬಗೆಗೂ ಆತ ನೂರಕ್ಕೆ ನೂರರಷ್ಟು ಸತ್ಯಾಂಶವನ್ನು ಹೇಳಿದ.

“ಅಮ್ಮಾ ಒಬ್ಬ ಭಾರಿ ರಾಜಕೀಯ ಕೈದಿಯೊಂದಿಗೆ ನೀನು ಈಗ ಪತ್ರ ವ್ಯವಹಾರ ಮಾಡುತ್ತಿರುವಿ. ಆತ ಈಗ ಜೈಲಿನಲ್ಲಿದ್ದರೂ ಹೊರಗೆ ನಾಲ್ಕು ಮಂದಿಗೆ ಬೇಕಾದವನು. ಆತ ಜೈಲಿನಿಂದ ಹೊರಬಂದ ಮೇಲೆ ಅವನೊಡನೆ ನಿನ್ನ ಮದುವೆಯಾಗುವ ಭಾಗ್ಯವಿದೆ. ನಿನ್ನ ಬಾಸಿಂಗ ಬಲ ಉತ್ತಮವಾಗಿದೆ,” ಎಂದು ಆತ ಹೇಳಿದಾಗ ತಂಗಮ್ಮಾಗೆ

(5ನೇ ಪುಟ ನೋಡಿ)

ಕರ್ನಾಟಕದ ವಿದ್ಯುತ್ ಕ

ವಿದ್ಯುತ್ ಕಡಿತ ಅನಿವಾರ್ಯವೇ ?

ಇತ್ತೀಚೆಗೆ ಬೆಂಗಳೂರಿಗೆ ಭೇಟಿಯಿತ್ತ ವಿದೇಶದಲ್ಲಿ ನೆಲೆಸಿರುವ ಭಾರತೀಯ ಇಂಜಿನೀಯರೊಬ್ಬರು ಉದ್ಗಾರ ತೆಗೆದಿದ್ದರು "ಕರ್ನಾಟಕದಲ್ಲಿ ವಿದ್ಯುತ್ ಕ್ಷಾಮವೇ ? ನನಗೆ ನೆನಪಿದ್ದ ಹಾಗೆ ಕರ್ನಾಟಕದಲ್ಲಿ ವಿದ್ಯುತ್ ವಿಪುಲವಾಗಿದ್ದು, ಕೈಗಾರಿಕೆಗಳನ್ನು ಆಹ್ವಾನಿಸಲಾಗುತ್ತಿತ್ತು. ಕರ್ನಾಟಕ ವಿದ್ಯುತ್ ಉತ್ಪಾದನೆಯಲ್ಲಿ ಮಾದರಿ ರಾಜ್ಯವಾಗಿತ್ತು. ಇಷ್ಟೊಂದು ವಿದ್ಯುತ್ ಕ್ಷಾಮ ಹೇಗೆ ಬಂತು ?"

60 ಮತ್ತು 70ರ ದಶಕದಲ್ಲಿ ವಿದ್ಯುತ್ ವಿಪುಲವಾಗಿದ್ದ ನಮ್ಮ ರಾಜ್ಯದಲ್ಲಿ, ಈಗ ಸುಮಾರು ಶೇಕಡಾ 14 ವಿದ್ಯುತ್ ಆಮದು ಮಾಡಬೇಕಾಗಿದೆ. ಕಳೆದ 4-5 ವರ್ಷಗಳಿಂದ ಹೆಚ್ಚು ಕಡಿಮೆ ಸತತವಾಗಿ ವಿದ್ಯುತ್ ಕಡಿತ ಅನಿವಾರ್ಯವಾಗುವ ಪರಿಸ್ಥಿತಿ ಒದಗಿ ಬಂದಿದೆ. ಹೆಚ್ಚೆಂದರೆ ಮಳೆಗಾಲದ 2-3 ತಿಂಗಳಲ್ಲಿ ವಿದ್ಯುತ್ ಕಡಿತ ಜಾರಿಯಲ್ಲಿರುವುದಿಲ್ಲ. ಬೇಸಗೆ ಕಾಲದ ತಿಂಗಳುಗಳಲ್ಲಿ 10% ದಿಂದ 75% ವರೆಗಿನ ಕಡಿತ ಸರ್ವೇ ಸಾಮಾನ್ಯವಾಗಿದೆ. (ಬಾಕ್ಸ್ ನೋಡಿ) ಬೇರೆ ತಿಂಗಳುಗಳಲ್ಲೂ 10-25% ಕಡಿತ ಸಾಮಾನ್ಯವಾಗಿ ಜಾರಿಯಲ್ಲಿರುತ್ತದೆ. ಈ ಪ್ರಮಾಣದ ವಿದ್ಯುತ್ ಕ್ಷಾಮಕ್ಕೆ ಕಾರಣಗಳೇನು ? ಪರಿಹಾರ ಸಾಧ್ಯವೇ ಎಂದು ವಿಶ್ಲೇಷಿಸುವುದು ರಾಜ್ಯದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ತುರ್ತಿನದಾಗಿದೆ.

ತಲಾ ವಿದ್ಯುತ್ ಬಳಕೆ ಒಂದು ದೇಶದ ಆರ್ಥಿಕ ಬೆಳವಣಿಗೆಯ ಸೂಚಕ ಎನ್ನಲಾಗುತ್ತಿದೆ. ಭಾರತದ ತಲಾ ವಿದ್ಯುತ್ ಬಳಕೆ, ಅಮೇರಿಕಾದ ತಲಾ ಬಳಕೆಯ 15 ರಲ್ಲಿ ಒಂದು ಪಾಲು ಸೋವಿಯೆತ್. ಒಕ್ಕೂಟದ 13ರಲ್ಲಿ ಒಂದು ಪಾಲು. ಚೀನಾದ ಬಳಕೆ ಸಹ ಭಾರತದ 3ರಷ್ಟಿದೆ. ಕರ್ನಾಟಕ ರಾಜ್ಯದ ತಲಾ ಬಳಕೆ, 186 ಕಿಲೋ ವಾಟ್ ಗಂಟೆ (KWM). ಇದು ದೇಶದ ತಲಾ ಬಳಕೆ 200 KWM ಗಿಂತಲೂ ಕಡಿಮೆ. (1984-85ರ ಅಂಕೆ- ಸಂಖ್ಯೆ)

ವಿದ್ಯುತ್ ಕ್ಷಾಮ ಏಕೆ ?

ದೇಶದಲ್ಲಿ ವಿದ್ಯುತ್. ಉತ್ಪಾದನೆ ಮತ್ತು ಹಂಚಿಕೆಯನ್ನು ಬಾಧಿಸುವ ಸಮಸ್ಯೆಗಳು ನಮ್ಮ ರಾಜ್ಯವನ್ನು ಕಾಡುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಕರ್ನಾಟಕಕ್ಕೆ ವಿಶಿಷ್ಟವಾದ ಕೆಲವು ಅಂಶಗಳನ್ನು ಗಮನಿಸುವುದಗತ್ಯ.

ಕರ್ನಾಟಕದ ವಿದ್ಯುತ್ ಉತ್ಪಾದನೆ ಮೂಲ ಮುಖ್ಯವಾಗಿ ಜಲ ವಿದ್ಯುತ್ ವಿಧಾನ-ಹೆಚ್ಚುಕಡಿಮೆ ಶೇಕಡಾ 90 ಭಾಗ ಇತ್ತೀಚೆಗೆ ಕಾರ್ಯರಂಭ ಮಾಡಿರುವ ರಾಯಚೂರು ಥರ್ಮಲ್ ಘಟಕವೊಂದೇ ಇದಕ್ಕೆ ಅಪವಾದ. ಈ ಕಾರಣದಿಂದ ವಿದ್ಯುತ್ ಉತ್ಪಾದನೆ ವಿಪರೀತವಾಗಿ ಮಳೆ ಆಧಾರಿಸಿದೆ. ಮಳೆ ಕೈಕೊಟ್ಟಾಗಲೆಲ್ಲಾ ವಿದ್ಯುತ್ ಕ್ಷಾಮ ಅನಿವಾರ್ಯವಾಗುವಂತಾಗಿದೆ. ಜಲ ವಿದ್ಯುತ್ ವಿಧಾನ ಬೇರೆ ವಿಧಾನಗಳಿಗಿಂತ ಕಡಿಮೆ ವೆಚ್ಚದ್ದಾದರೂ ಮತ್ತು ರಾಜ್ಯದ ಜಲ ವಿದ್ಯುತ್ ಸಂಪನ್ಮೂಲಗಳ ಸಾಮರ್ಥ್ಯ ಶೇಕಡಾ 40ರಷ್ಟು ಮಾತ್ರ ಇನ್ನೂ ವಿನಿಯೋಗಿಸಿದ್ದರೂ, ಮಳೆಯ ಅನಿಶ್ಚಿತತೆ ಮಿತಿಯನ್ನು ವಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ಕೈಗಾ ಅಣುಸ್ಥಾವರದಂತಹ ಇತರ ವಿಧಾನಗಳಿಗೆ ಪ್ರಾಮುಖ್ಯತೆ ಕೊಡಬೇಕಾಗಿದೆ.

ವಿದ್ಯುತ್ ಸಾಗಾಣಿಕೆ ಮತ್ತು ವಿತರಣಾ ನಷ್ಟಗಳು (Tranmission & Distribution Losses) ದೇಶದ ಸರಾಸರಿಗಿಂತ ಹೆಚ್ಚಿದೆ. 1984-85ರಲ್ಲಿ ದೇಶದ ಸರಾಸರಿ ನಷ್ಟ 21.3 ಶೇಕಡಾ ಇದ್ದರೆ, ಕರ್ನಾಟಕದು 22.56 ಶೇಕಡಾ, ಸುಮಾರು 12ಶೇ. ನಷ್ಟ ಅನಿವಾರ್ಯವಾದರೂ ಕರ್ನಾಟಕದ ನಷ್ಟ ಕಡಿಮೆ ಮಾಡಲು ಸಾಕಷ್ಟು ಅವಕಾಶಗಳಿವೆ. ಗುಜರಾತ್ ಮತ್ತು ಮಹರಾಷ್ಟ್ರದಂತಹ ರಾಜ್ಯಗಳ ಶೇಕಡಾ ನಷ್ಟ 17 ಇದೆ. ಹಲವು ತತ್‌ಕ್ಷಣದ ಕಡಿಮೆ ಖರ್ಚಿನ ಮತ್ತು ದೂರಗಾಮಿ ಹೆಚ್ಚಿನ ವೆಚ್ಚದ ಸರಿಯಾದ ಕ್ರಮಗಳನ್ನು ಯೋಜನಾಬದ್ಧವಾಗಿ ಮಾಡಿದರೆ ಇದು ಸಾಧ್ಯವಿದೆ. ಆದರೆ ಕಳೆದ 4-5 ವರ್ಷಗಳಲ್ಲಿ KEB ಇದಕ್ಕೆ ಸರಿಯಾದ ಗಮನ ವಹಿಸಿಲ್ಲ. 0.5ಶೇ.ರಷ್ಟು ಸಹ ಇದು ಕಡಿಮೆ ಆಗಿಲ್ಲ. ನಷ್ಟವನ್ನು ಸಾಮಾನ್ಯವಾಗಿ ಮಾರಬಹುದಾದ ಯುನಿಟುಗಳ ಶೇಕಡಾವಾಗಿ ಹೇಳುತ್ತಾರೆ. ಈ ನಷ್ಟಗಳು ಆದ ನಂತರ ಮಾರಿದ ಪ್ರತಿ 3 ಯುನಿಟಿಗೆ 1 ಯುನಿಟು ಈ ರೀತಿ ನಷ್ಟವಾಗುತ್ತಿದೆ. ಶೇಕಡಾ 1 ನಷ್ಟ ಕಡಿಮೆ ಮಾಡಿದರೂ, KEBಗೆ 2ಕೋಟಿರೂ. ಲಾಭವಿದೆ.

ವಿತರಣಾ ನಷ್ಟಗಳು ರಾಜ್ಯದಲ್ಲಿ ಹೆಚ್ಚಿರಲು ಒಂದು ಪೂರಕ ಕಾರಣ ವಿದ್ಯುತ್ ಉತ್ಪಾದನಾ ಕೇಂದ್ರಗಳು ಬಳಕೆಯ ಕೇಂದ್ರಗಳಿಗಿಂತ ಬಹಳಷ್ಟು ದೂರವಿರುವುದು. (ಸುಮಾರು 300-400 ಕಿ.ಮೀ.) ಇದು ಜಲ ವಿದ್ಯುತ್ ಉತ್ಪಾದನಾ ವಿಧಾನದ ಮಿತಿ ಸಹ. ಯಾಕೆಂದರೆ ಉತ್ಪಾದನಾ ಕೇಂದ್ರ ಪ್ರಕೃತಿಯಿಂದ ನಿರ್ಧಾರಿತವಾಗುತ್ತದೆ. ಬಳಕೆಯ ಕೇಂದ್ರಗಳ ವಿಕೇಂದ್ರೀಕರಣ, ಸೂಕ್ತ ಯೋಜನೆಯಿಂದ ಇದನ್ನು ಬಗೆಹರಿಸಬಹುದಾಗಿತ್ತು. ಆದರೆ ಚಾರಿತ್ರಿಕವಾಗಿ ಈ ತಪ್ಪು ಆಗಿ ಹೋಗಿದೆ.

ರಾಜ್ಯದ ವಿದ್ಯುತ್‌ಶಕ್ತಿಯ ಶೇ.70 ಕೈಗಾರಿಕೆಗೆ ಬಳಕೆಯಾಗುತ್ತದೆ. ಮನೆ ಬಳಕೆಗೆ 17.5ಶೇ. ಬಳಕೆಯಾದರೆ, ಕೃಷಿ ನೀರಾವರಿ ಪಂಪುಸೆಟ್ಟಿಗೆ ಶೇ.8 ಬಳಕೆಯಾಗುತ್ತದೆ. ಆದರೆ ಕೈಗಾರಿಕೆಗೆ ಬಳಕೆಯಾಗುವ ವಿದ್ಯುತ್‌ಶಕ್ತಿಯಲ್ಲಿ ಹೆಚ್ಚು ಕಡಿಮೆ ಮೂರನೇ ಎರಡು ಭಾಗದಷ್ಟು ಕೇವಲ 20 ಕಾರ್ಖಾನೆಗಳು ಬಳಸುತ್ತವೆ. ಇವು ವಿದ್ಯುತ್ತನ್ನೇ ಮೂಲವಸ್ತುವಾಗಿ ಬಳಸುವ ಕಾರ್ಖಾನೆಗಳು. ಇವುಗಳಲ್ಲಿ ಇಂಡಿಯನ್ ಅಲ್ಯೂಮಿನಿಯಂ ಒಂದೇ ಶೇ. 10-15 ಭಾಗ ಬಳಸುತ್ತದೆ. ಎರಡನೆಯ ದೊಡ್ಡ ಬಳಕೆಗಾರ ಭದ್ರಾವತಿಯ ಉಕ್ಕು ಕಾರ್ಖಾನೆ. ಈ 20 ಕಾರ್ಖಾನೆಗಳನ್ನು ಬಿಟ್ಟರೆ ಸುಮಾರು 1300 High Tensron(HT) ಬಳಸುವ ಕೈಗಾರಿಕೆಗಳು 1ಲಕ್ಷ Low Tension (LT) ಬಳಸುವ ಕೈಗಾರಿಕೆಗಳು ಉಳಿದ ಮೂರನೇ ಒಂದು ಭಾಗವನ್ನು ಬಳಸುತ್ತದೆ.

ದೇಶದ ಸರಾಸರಿ, ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಲಭ್ಯವಿರುವ ವಿದ್ಯುತ್‌ಶಕ್ತಿಯ ಸೂಕ್ತವಾದ, ಸಮರ್ಥವಾದ ಬಳಕೆಯನ್ನು ಆರ್ಥಿಕ ಬೆಳವಣಿಗೆಗಾಗಿ ಮಾಡಿಲ್ಲ ಎನ್ನಬಹುದು. ಒಂದು ದಶಲಕ್ಷ ಯುನಿಟುಗಳಿಗೆ ವಿದ್ಯುತ್ ಶಕ್ತಿಯ ಬಳಕೆಯಿಂದ ದೊರಕಿಸಬಹುದಾದ ಉದ್ಯೋಗ, ಹೂಡಬಹುದಾದ ಕೈಗಾರಿಕಾ ಬಂಡವಾಳ, ಕೈಗಾರಿಕಾ ಉತ್ಪನ್ನ, ಈ ರೀತಿ ಯಾವುದೇ ಸೂಚ್ಯಾಂಕದಿಂದ ನೋಡಿದರೂ ಕರ್ನಾಟಕ ಸೂಚಕ ಅತಿ ಕಡಿಮೆ ಇದೆ. (ಥಿಂಕ್ ಟ್ಯಾಂಕ್ ವರದಿ)

ಈ ವೈಪರೀತ್ಯ ಬಂದಿರುವುದು ಭಾಗಶಃ 60-70ರ ದಶಕದಲ್ಲಿ ವಿದ್ಯುತ್ ವಿಪುಲವಾಗಿದೆ ಎಂಬಧೋರಣೆಯಿಂದ ಸೂಕ್ತ ಬಳಕೆಯ ಬಗ್ಗೆ ಅಸಡ್ಡೆ, ದೂರದೃಷ್ಟಿಯ ಅಭಾವ. ಪರಿಸ್ಥಿತಿ ಈ ರೀತಿ ಸ್ಥಿರವಾಗಿರುತ್ತದೆ, ಎನ್ನುವ ಮನೋಭಾವ ವಿದ್ಯುತ್ ಕರ್ನಾಟಕ ದಕ್ಷ ವಿಫಲವಾಗಿದೆ. ಎಂದು ಹಲವು ಸರ್ಕಾರಿ ಸಂಸ್ಥೆಗಳು ಪದೇ ಪದೇ ವರದಿ ಮಾಡಿವೆ. 82-83ರಲ್ಲಿ ಸಿದ್ಧಪಡಿಸಿದ ಕೆಲವು ವರದಿಗಳು ಸಹ 86ರ ದಶಕದ ಉತ್ತರಾರ್ಧದಲ್ಲಿ ವಿಫಲವಾಗಿರುತ್ತದೆ ಎಂದು ಅಂದಾಜು ಮಾಡಿವೆ. ಇದು ಕೈಗಾರಿಕೆ ಬೆಳವಣಿಗೆಯ ಯೋಜನೆಯ ವೈಫಲ್ಯ ಎಂದು ಸಹ ಹೇಳಬಹುದು. ಇದರಿಂದ ವಿದ್ಯುತ್ ಶಕ್ತಿಗಿರುವ ಬೇಡಿಕೆ ಅಂದಾಜು ಮೀರಿ ಏರಿ ಹೋಗಿದೆ.

ರಾಜ್ಯದ ವಿವಿಧ ವಿದ್ಯುತ್ ಉತ್ಪಾದನಾ ಬೃಹತ್ ಯೋಜನೆಗಳನ್ನು ಸರಿಯಾದ ಸಮಯದಲ್ಲಿ ಮುಗಿಸದಿರುವುದು ವಿದ್ಯುತ್ ಕ್ಷಾಮಕ್ಕೆ ಇನ್ನೊಂದು ಪ್ರಮುಖ ಕಾರಣ. ಕಾಳಿ ಹಂತ-1, ರಾಯಚೂರು ಥರ್ಮಲ್ ಘಟಕ ವರಾಹಿ ಹಂತ-1 ಯೋಜನೆಗಳು ಬಹಳಷ್ಟು ವಿಳಂಬವಾಗಿವೆ. ಈ ಯೋಜನೆಗಳಿಗೆ ಹಣದ ಅಭಾವ ಇದಕ್ಕೆ ಮುಖ್ಯ ಕಾರಣವಾದರೂ, ನಿರ್ವಹಣೆಯಲ್ಲಿ ಅಸಮರ್ಥತೆ ಭ್ರಷ್ಟಾಚಾರ ಸಹ ಪೂರಕ ಕಾರಣಗಳಾಗಿವೆ.

ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಹಣದ ಅಭಾವ ನಮ್ಮ ರಾಜ್ಯ ಮಾತ್ರ ಅಲ್ಲ ದೇಶದಲ್ಲಿ ಎದುರಾದ ಸಮಸ್ಯೆ. 6ನೇ ಯೋಜನೆಯ ...

[6ನೇ ಪುಟ ನೋಡಿ]

ಇದೋ ಪ. ಬಂಗಾಳದ ಉದಾಹರಣೆ

ಕರ್ನಾಟಕದಲ್ಲಿ ವಿದ್ಯುತ್ ಶಕ್ತಿ ಕ್ಷೇತ್ರದಲ್ಲಿ ಜನತಾ ಸರ್ಕಾರದ ವಿಫಲತೆ, ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಸಾಧನೆಗಳೊಂದಿಗೆ ಹೋಲಿಸಿದರೆ ಗೊತ್ತಾಗುತ್ತದೆ. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗ ವಿದ್ಯುತ್ ಕ್ಷಾಮ ಅದು ಎದುರಿಸಬಹುದಾದ ಅತಿ ದೊಡ್ಡ ಸಮಸ್ಯೆಯಾಗಿತ್ತು. ಕಾಂಗ್ರೆಸ್ ಸರ್ಕಾರದ ದುರಾಡಳಿತ ವಿದ್ಯುತ್ ಕ್ಷೇತ್ರದಲ್ಲಿ ಪರಮಾವಧಿ ಮುಟ್ಟಿತು. ಎಡರಂಗ ಈ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿತು. ವಿದ್ಯುತ್ ಕ್ಷಾಮವನ್ನು ಎದುರಿಸುವಲ್ಲಿ ಎಡರಂಗ ಸರ್ಕಾರ ಕೈಗಾರಿಕೆಗೆ ಪ್ರಾಮುಖ್ಯತೆ ಕೊಡುವ ನೀತಿಯನ್ನು ಅಂಗೀಕರಿಸಿತು. ಆದ್ದರಿಂದ ಹೆಚ್ಚಿನ ಕಡಿತ ಮನೆ ಬಳಕೆಯ ಮೇಲೆ ಒಂದು ಸರ್ಕಾರ ಮಧ್ಯಮ ವರ್ಗದಲ್ಲಿ ಅತೃಪ್ತಿ ಉಂಟಾದರೂ, ರಾಜ್ಯದ ಒಟ್ಟಾರೆ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಈ ನೀತಿಯನ್ನು ಮುಂದುವರಿಸಿತು. ಕರ್ನಾಟಕದಲ್ಲಿ ಇದಕ್ಕೆ ತದ್ವಿರುದ್ಧವಾದ ನೀತಿ ಜಾರಿಯಲ್ಲಿದೆ. ಅತ್ಯಂತ ಹೆಚ್ಚಿನ ಕಡಿತ ಕೈಗಾರಿಕೆಗಳ ಮೇಲೆ ಹೇರಲಾಗುತ್ತಿದೆ.

ಎಡರಂಗ ಸರ್ಕಾರ ವಾರ್ಷಿಕ ಬಜೆಟ್‌ನ ಶೇಕಡಾ [illegible]0 ಭಾಗವನ್ನು ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ವಿನಿಯೋಗ ಮಾಡುತ್ತಿದೆ. ಇದರಿಂದ 10 ವರ್ಷಗಳಲ್ಲಿ 1337 ಮೆಗಾವಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸಾಧ್ಯವಾಗಿದೆ. ಬಳಕೆಗೆ ಲಭ್ಯವಿರುವ ವಿದ್ಯುತ್ ಶಕ್ತಿ 5079-ರಿಂದ 6750 ದಶಲಕ್ಷ ಯೂನಿಟ್‌ಗಳಿಗೆ ಏರಿದೆ. ಕಾಂಗ್ರೆಸ್ ಆಳ್ವಿಕೆಯ ಕೆಲವು ರಾಜ್ಯಗಳಲ್ಲಿ ಥರ್ಮಲ್ ವಿದ್ಯುತ್ ಘಟಕಗಳ ಕೆಲಸ ಕೇವಲ 25-30 ರಷ್ಟು ಪರಿಣಾಮಕಾರಿಯಾಗಿದ್ದರೆ ಪ.ಬಂಗಾಳದಲ್ಲಿ 45ಕ್ಕೇರಿದೆ.

ವಿದ್ಯುತ್ ಕಡಿತ ಯಾವಾಗ ಎಷ್ಟು ?

ವರ್ಷ	ಅವಧಿ	ವಿದ್ಯುತ್ ಶಕ್ತಿ (★) ಕಡಿತ (./.)	ಡಿಮಾಂಡ್ (★) ಕಡಿತ (./.	ಯಾವ ಬಳಕೆದಾರರಿಗೆ
1982	ಜನವರಿ ಮಾರ್ಚ್	10-33.33	10-30	ಎಲ್ಲಾ HT ಬಳಕೆದಾರರಿಗೆ
"	ಎಪ್ರಿಲ್ ಜೂನ್	10-45	10-45	250 KVA ಗಿಂತ ಹೆಚ್ಚಿನ ಎಲ್ಲಾ ಬಳಕೆದಾರರಿಗೆ
"	ಆಕ್ಟೋಬರ್ ಜನವರಿ 83	10-50	10-33.33	100 KVA ಗಿಂತ ಹೆಚ್ಚಿನ HT ಬಳಕೆದಾರರಿ ಗೆ
1983	ಫೆಬ್ರುವರಿ ಜೂನ್	10-75	66-90	"
"	ಜುಲೈ ಸೆಪ್ಟೆಂಬರ್	25	25	5000 KVA ಗಿಂತ ಹೆಚ್ಚಿನ ಬಳಕೆದಾರರಿಗೆ ಮಾತ್ರ
"	ಅಕ್ಟೋಬರ್ ಡಿಸೆಂಬರ್	10-45	10-33.33	250 KAV ಗಿಂತ ಹೆಚ್ಚಿನ HT ಬಳಕೆದಾರರಿಗೆ
1984	ಜನವರಿ ಮಾರ್ಚ್	33.33-65	33.33-65	"
"	ಏಪ್ರಿಲ್ ಜೂನ್	8.33-55	33.33-75	"
"	ಜುಲೈ ಸೆಪ್ಟೆಂಬರ್	10-25	10-25	1000 KVA ಗಿಂತ ಹೆಚ್ಚಿನ ಬಳಕೆದಾದರಿಗೆ
"	ಅಕ್ಟೋಬರ್ ಡಿಸೆಂಬರ್	25-60	20-40	250 KVA ಗಿಂತ ಹೆಚ್ಚಿನ ಬಳಕೆ ದಾರರಿಗೆ

★ KVA ಹೆಚ್ಚಾದ ಹಾಗೆ ಹೆಚ್ಚಿನ ಶೇಕಡಾ ಕಡಿತ ಅನ್ವಯವಾಗುತ್ತದೆ. ಕೆಲವು ಬಾರಿ ಕೈಗಾರಿಕೆಯ ರೀತಿಯ (ಜವಳಿ, ಉಕ್ಕು ಇತ್ಯಾದಿ) ಮೇಲೆ ಸಹ ಬೇ[illegible] ಅನ್ವಯವಾಗುತ್ತದೆ.

ಹೋಟೆಲ್ ಕಾರ್ಮಿಕರ ಐಕ್ಯ ಹೋರಾಟಕ್ಕೆ ಕರೆ

ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ, 8ಗಂಟೆ ದುಡಿಮೆ, ಕೆಲಸದ ಭದ್ರತೆ ಮುಂತಾದ ಜ್ವಲಂತ ಸಮಸ್ಯೆಗಳ ಕುರಿತು ಐಕ್ಯವಾದ ನಿರ್ಣಯಕ ಹೋರಾಟ ರೂಪಿಸಲು ಎಲ್ಲಾ ಹೋಟೆಲ್ ಕಾರ್ಮಿಕ ಸಂಘಗಳ ಜಂಟಿ ಸಮಾವೇಶ ಏರ್ಪಡಿಸಿ ಕ್ರಿಯಾ ಸಮಿತಿ ರಚಿಸಲು ಕರೆ ನೀಡಲಾಯಿತು. ಮೇ 15ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕಸಂಘದ ಆಶ್ರಯದಲ್ಲಿ ಪುರಭವನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಕಾ|| ಎಸ್. ಸೂರ್ಯನಾರಾಯಣ ರಾವ್ ಅವರು ಈ ಸಲಹೆ ನೀಡಿದರು.

ರಜೆ, ಇ.ಎಸ್.ಐ., ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ, ಬೋನಸ್ ಮುಂತಾದ ಯಾವೊಂದು ಸೌಲತ್ತುಗಳಿಲ್ಲದೆ ಮಾಲೀಕರ ಕಿರುಕುಳ ಎದುರಿಸಿ ಅಡುಗೆ ಮನೆಯ ಸ್ಟೋರ್‌ರೂಮುಗಳಲ್ಲಿ ಗೋಣಿಚೀಲ ಹಾಕಿ ಜೀವನ ಸಾಗಿಸುವ ಹೋಟೆಲ್ ಕಾರ್ಮಿಕನಿಗೆ ಜನಸಾಮಾನ್ಯರಂತೆ ಬಾಳುವ ಸಂಚಾರಿಕ ಜೀವನವಿಲ್ಲದೆ ಶೇ. 70ರಷ್ಟು ವ್ಯಾಧಿಯಿಂದ ನರಳುತ್ತಿರುವ ಕಟು ಸತ್ಯವನ್ನು ವಿವರಿಸಿದರು. 70ರ ದಶಕದಲ್ಲಿ ಬೆಳೆದು ಬಂದ ಪ್ರಾರಂಭದ ಹೋರಾಟಗಳನು ನೆನಪಿಸುತ್ತಾ; 1979ರ ಮೇ ದಿನಾಚರಣೆಯಂದು 8ಗಂಟೆ ಕೆಲಸಕ್ಕೆ ಒತ್ತಾಯಿಸಿ ನಗರದ 300 ಹೋಟೆಲುಗಳನ್ನು ಬಂದ್ ಮಾಡಿ ನಡೆಸಿದ ಚರಿತ್ರಾರ್ಹವಾದ ಹೋರಾಟದ ಅನುಭವದ ಆಧಾರದಲ್ಲಿ ಸಂಘಟನೆಗೆ ಚಾಲನೆ ನೀಡಬೇಕೆಂದು ಸಂಘದ ಸಂಸ್ಥಾಪಕ ಮುಖಂಡರು ಹಾಗೂ ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿಯವರು ಆದ ಕಾ|| ವಿ. ಜೆ. ಕೆ. ನಾಯರ್‌ರವರು ಕರೆ ನೀಡಿದರು. ಸಭೆಯಲ್ಲಿ ಮೈಸೂರು ಜಿಲ್ಲಾ ಹೋಟೆಲ್ ಕಾರ್ಮಿಕ ಮುಖಂಡರಾದ ಕಾ|| ಮೋಹನ್ ಕುಮಾರ್, ಕಾ|| ಟಿ. ಎಸ್. ಅನಂತರಾಮ್, ಗೋಪಾಲ ಗೌಡರವರುಗಳು ಮಾತನಾಡಿದರು. ಸಭೆಯ ಮೊದಲಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಇ.ಕೆ.ಎನ್. ರಾಜನ್ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷ ಕಾ|| ಅಡವೀಶ್‌ರವರು ಅಧ್ಯಕ್ಷತೆ ವಹಿಸಿದ್ದರು.

○

ಡಿ. ವೈ. ಎಫ್. ಐ. ಮುಖಂಡರ ಮೇಲೆ ಹಲ್ಲೆ

ಮೇ 6 ರ ರಾತ್ರಿ ಶ್ರೀನಿವಾಸ್‌ರವರ ಮೇಲೆ ಗೂಂಡಗಳು ಎರಗಿದಾಗ ರಕ್ಷಣೆಗೆ ಬಂದ ಅವರ ತಾಯಿ ಮತ್ತು ತಂಗಿ ಅವರಿಗೆ ಅಪಾಯಕಾರಿ ಆಯುಧಗಳಿಂದ ಥಳಿಸಲಾಗಿದೆ. ಶ್ರೀನಿವಾಸ್‌ರವರ ಬಲಗಣ್ಣಿಗೆ ತೀವ್ರ ಪೆಟ್ಟಾಗಿದೆ. ತಾಯಿ ಅವರು ಇನ್ನೂ ಆಸ್ಪತ್ರೆಯಲ್ಲಿರುತ್ತಾರೆ. ತಂಗಿ ಕೈನ 3 ಬೆರಳಿಗೆಊನವಾಗಿದೆ.

ಡಿ.ವೈ.ಎಫ್.ಐ ಬೆಂಗಳೂರು ಜಿಲ್ಲೆಯ ಮುಖಂಡ ಕಾ|ಶ್ರೀನಿವಾಸ್ ಮತ್ತು ಅವರ ಸಂಬಂಧಿಕರ ಮೇಲೆ 6-5-87ರ ರಾತ್ರಿ ಶ್ರೀರಾಮ ಪುರಂನ ನೀಲಗಿರಿ ಪಾಪಣ್ಣ ಬ್ಲಾಕ್‌ನಲ್ಲಿ ನಡೆದ ಹಲ್ಲೆಯನ್ನು ಖಂಡಿಸಿ 10-5-1987 ರಂದು ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು. ಮೆರವಣಿಗೆಯು ಮುಖ್ಯ ಬೀದಿಗಳಲ್ಲಿ ಹಾದು ಹೋಗಿ ಶ್ರೀರಾಮಪುರಂ ಪೋಲೀಸ್‌ರು ರೌಡಿಗಳಿಗೆ ರಕ್ಷಣೆ ನೀಡಿದ್ದನ್ನು ಖಂಡಿಸಿ ಸ್ಟೇಷನ್ ಎದುರು ಧರಣಿ ನಡೆಸಲಾಯಿತು.

2-5-87 ರಂದು ನೀಲಗಿರಿ ಪಾಪಣ್ಣ ಬ್ಲಾಕ್‌ನಲ್ಲಿನ ಸಾರ್ವಜನಿಕರಿಗೆ ಸಂಬಂಧಿಸಿದ ಭಜನೆ ಮಂದಿರವನ್ನು ಕೆ.ಎಂ.ಮಾಯಣ್ಣ ಎಂಬ ವ್ಯಕ್ತಿ ಆಕ್ರಮಿಸಿ ತನ್ನ ಮನೆಗೆ ಸೇರಿಸಿಕೊಂಡಿದ್ದನ್ನು ಶ್ರೀನಿವಾಸ್ ಪ್ರತಿಭಟಿಸಿ ನಗರಸಭೆಯವರಿಂದ ತಡೆಯೊಡ್ಡಿದ್ದು, 6 ರಂದು ನಡದ ಹಲ್ಲೆಗೆ ಕಾರಣವಾಗಿದೆ, ಮತ್ತು ಈಗಾಗಲೇ ರೌಡಿಲೀಸ್ಟಿನಲ್ಲಿರು ನಾಲ್ಕು ಜನ ಗೂಂಡಗಳು ಹಲ್ಲೆಗೆ ನಿಯೋಜಿತರಾಗಿದ್ದರು.

ಈ ವಿಷಯದಲ್ಲಿ ಶ್ರೀರಾಮಪುರಂ ಪೋಲೀಸರು ರೌಡಿಗಳ ಜೊತೆಯಲ್ಲಿ ಶಾಮೀಲಾಗಿದ್ದಾರೆ. 10-5-87 ರಂದು ಮೆರವಣಿಗೆಯ ಮೂಲಕ ಅಸಿಸ್ಟೆಂಟ್ ಪೋಲೀಸ್ ಕಮೀಷನರ್ ಮುಖ್ಯಮಂತ್ರಿಗಳಿಗೂ ರಾಜ್ಯಪಾಲರು,ಶಾಸಕರುಗಳಿಗೂ ಮನವಿ ಸಲ್ಲಿಸಿ ಕೆ.ಎಂ. ಮಾಯಣ್ಣ ಮತ್ತು ಶ್ರೀ ರಾಮಪುರದ ಪೋಲೀಸ್‌ರ ವಿರುದ್ಧ ಮನವಿ ಸಲ್ಲಿಸಿ ರಕ್ಷಣೆ ಮತ್ತು ಪರಿಹಾರ ಕೇಳಲಾಗಿದೆ. ಇನ್ನೂ ನೀಲಗಿರಿ ಪಾಪಣ್ಣ ಬ್ಲಾಕ್‌ನಲ್ಲಿ ಉದ್ರಿಕ್ತ ವಾತಾವರಣವಿದೆ.

ಧರಣಿಯನ್ನು ಉದ್ದೇಶಿಸಿ ರಾಜ್ಯ ಕಾರ್ಯದರ್ಶಿ ಕಾ||ಎಸ್.ಶಿವರಾಂ, ಸಿ.ಪಿ.ಐ (ಎಂ)ಮುಖಂಡ ಪಿ.ಕೆ.ಸುಬ್ರಮಣಿ ಆಟೋರಿಕ್ಷಾ ಚಾಲಕರ ಸಂಘದ ಎ.ವಿ.ರಮೇಶ್, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ. ಡಿ.ಶಿವಶಂಕರ್ ಮಹಿಳಾ ಸಂಘಟನೆಯಿಂದ ಕಾ.ಕೆ. ಶಾಂತಕುಮಾರಿ ಎನ್. ರಾಜಣ್ಣ ಮುಂತಾದವರು ಮಾತನಾಡಿದರು.

○

ರಾಷ್ಟ್ರೀಯ ಆಂದೋಲನ ಸಮಿತಿ ಕರೆ ಯಶಸ್ವಿ

ಹರಿಹರ

ಕೈಗಾರಿಕಾ ವಿವಾದಗಳ ಮಸೂದೆ ಮತ್ತು ಟ್ರೇಡ್ ಯೂನಿಯನ್ ಮಸೂದೆಗಳ ತಿದ್ದುಪಡಿಗೆ ಪ್ರತಿಭಟನೆ ಸೂಚಿಸಿ ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಗೆ ಅನುಸಾರವಾಗಿ ಎ. 16ರಂದು ಹರಿಹರದ ಸಿ.ಐ.ಟಿ.ಯು ಎ.ಐ.ಟಿ.ಯು.ಸಿ. ಮತ್ತು ಬಿ.ಎಂ. ಎಸ್.ನೇತೃತ್ವದಲ್ಲಿ ಕಾರ್ಮಿಕರು ಜಂಟಿಯಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸೊಲ್ಲಾಪುರ-ಬೆಂಗಳೂರು ಗೋಲ ಗುಂಬಜ್ ಎಕ್ಸ್‌ಪ್ರೆಸ್ ರೈಲನ್ನು ಹರಿಹರ ರೈಲು ನಿಲ್ದಾಣದಲ್ಲಿ 15 ನಿಮಿಷಗಳ ಕಾಲ ತಡೆಹಿಡಿಯಲಾಯಿತು. ಮೂರು ಸಂಘಗಳನ್ನು ಪ್ರತಿನಿಧಿಸುವ ಮೂರು ಬಾವುಟಗಳೊಂದಿಗೆ ಆಗಮಿಸಿದ ನೂರಾರು ಕಾರ್ಮಿಕರು ರೈಲು ಹಳಿಗಳ ಮೇಲೆ ಕುಳಿತು ಕೇಂದ್ರಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಅನಂತರ ಮೆರವಣಿಗೆಯಲ್ಲಿ ಹೊರಟ ಕಾರ್ಮಿಕರು ಅಂಚೆ ಕಛೇರಿ ಆವರಣವನ್ನು ಪ್ರವೇಶಿಸಿ ಮತ ಪ್ರದರ್ಶನ ನಡೆಸಿದರು. 20 ನಿಮಿಷಗಳ ಕಾಲ ಕಛೇರಿಯ ಕಾರ್ಯ ಸ್ತಬ್ಧಗೊಂಡಿತು.

ಅದೇ ದಿನ ಸಂಜೆ ಮೆರವಣಿಗೆಯನ್ನು ಸಂಘಟಿಸಲಾಗಿದ್ದು ಕಿರ್ಲೋಸ್ಕರ್ ಕಾರ್ಮಿಕರು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಿ.ಐ.ಟಿ.ಯು.ನ ಕಾ|| ಆರ್. ಬಿ. ಅಂಗಡಿ ಮತ್ತು ಕಾ|| ಸಿ.ಎಂ. ಜಯಾನಂದ, ಎ.ಐ.ಟಿ.ಯು.ಸಿ.ಯ ಕಾ|| ಜೆ. ಎಂ. ಹನುಮಂತಪ್ಪ ಮತ್ತು ಬಿ.ಎಂ.ಎಸ್‌ನ ಎಂ.ತಿಪ್ಪಣ್ಣ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ತಾಲ್ಲೂಕು ಕಛೇರಿ ಆವರಣದಲ್ಲಿ ಸಮಾವೇಶಗೊಂಡ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಯು.ನ ಕಾ|| ನಿತ್ಯಾನಂದ ಸ್ವಾಮಿ, ಎ.ಐ.ಟಿ.ಯು.ಸಿ.ಯ ಕಾ|| ಶ್ರೀನಿವಾಸ ಗೌಡ ಮತ್ತು ಬಿ.ಎಂ.ಎಸ್.ನ ಮಲ್ಲಾರಿ ಜೋಯ್ಸ್ ಮಾತನಾಡಿದರು.

ಮೈಸೂರು

ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಯ ಮೇರೆಗೆ ಎ.16ರಂದು ಮೈಸೂರಿನಲ್ಲಿ ಸಿ.ಐ.ಟಿ.ಯು. ಆಶ್ರಯದಲ್ಲಿ ಪ್ರತಿಭಟನಾ ಸಭೆ ನಡೆಯಿತು. ಕೇಂದ್ರ ಸರ್ಕಾರವು ತರಲಿರುವ ಕರಾಳ ಟ್ರೇಡ್ ಯೂನಿಯನ್ ಕಾಯಿದೆ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ಗಳ ತಿದ್ದುಪಡಿ, ಹೊಸ ಬೆಲೆ ಸೂಚ್ಯಂಕ ಇವುಗಳನ್ನು ವಿರೋಧಿಸಿ ಬಹಿರಂಗ ಸಭೆ ನಡೆಸಲಾಯಿತು.

ಸಿ. ಐ. ಟಿ. ಯು. ಮುಖಂಡರಾದ ಕಾ|| ಎಂ.ಎನ್. ಉಗ್ರಪ್ಪ, ಮೋಹನ ಕುಮಾರ್,ಶಾಂತಪ್ಪ ಮತ್ತು ಅಣ್ಣಪ್ಪ ಅವರುಗಳು ಸಭೆಯಲ್ಲಿ ಮಾತನಾಡಿ ಕೇಂದ್ರಸರ್ಕಾರದ ಕಾರ್ಮಿಕ ವಿರೋಧಿ ನಿಲುವನ್ನು ಖಂಡಿಸಿ,ಇದರ ವಿರುದ್ಧ ಇಡೀ ಕಾರ್ಮಿಕ ಸಮುದಾಯ ಹೋರಾಡಬೇಕೆಂದು ಕರೆ ನೀಡಿದರು.

ಗುಲ್ಬರ್ಗಾ

ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಯ ಮೇರೆಗೆ ಗುಲ್ಬರ್ಗಾದ ಎಂ. ಎಸ್.ಕೆ. ಮಿಲ್ ಕಾರ್ಮಿಕರು ಎ.16 ರಂದು ಕಾರ್ಮಿಕ ಆಯುಕ್ತರ ಕಛೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಿ ಮನವಿಯನ್ನು ಅರ್ಪಿಸಿದರು. ಕಾರ್ಮಿಕ ವಿರೋಧಿ ಮಸೂದೆಗಳನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ಇನ್ನೂ ಉಗ್ರವಾದ ಚಳವಳಿ ನಡೆಸಲಾಗುವುದೆಂದು ಕಾರ್ಮಿಕ ಸಂಘದ ಪ್ರಕಟನೆ ತಿಳಿಸಿದೆ.

ಉಡುಪಿ

ಎ.16ರಂದು ಉಡುಪಿಯಲ್ಲಿ ಸಿ.ಐ. ಟಿ.ಯು.ಗೆ ಸೇರಿದ ಹಂಚು, ಬೀಡಿ, ನೇಯ್ಗೆ ಮತ್ತಿತರ ಕಾರ್ಮಿಕರು ಕರಾಳ ಕಾರ್ಮಿಕ ವಿರೋಧಿ ಕಾಯಿದೆಯನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ಕಾ|| ಸಾಧು ಅಮೀನ್ ವಹಿಸಿದ್ದರು. ಕಾ|| ಕೆ. ವಿಶ್ವನಾಥ್ ಮತ್ತು ಕಾ|| ಡೇವಿಡ್ ಕರ್ಕಡ ಸಭೆಯನ್ನುದ್ದೇಶಿಸಿ ಮಾತನಾಡಿದರು. ಉಡುಪಿಯಲ್ಲಿರುವ ಸಿ. ಐ. ಟಿ. ಯು.ಗೆ ಸೇರಿದ ಕಾರ್ಮಿಕ ಸಂಘಗಳು ಕರಾಳ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ ತಂತಿಯನ್ನು ಕಳುಹಿಸಿದೆ.

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ದಿನಾಂಕ 17-5-87 ರಂದು ಕೊಡಗು ಜಿಲ್ಲೆಯ ವಿರಾಜಪೇಟೆಯ ತಾಲ್ಲೂಕ್ ಮಟ್ಟದ ಅಧ್ಯಯನ ಶಿಬಿರವು ಅರಮೇರಿಯಲ್ಲಿ ನಡೆಯಿತು.ಆಯ್ಕೆ ಮಾಡಿದ 55 ಶಿಬಿರಾರ್ಥಿಗಳು ಭಾಗವಹಿಸಿದ್ದರು. 15 ಜನ ಯುವತಿಯರು ಭಾಗವಹಿಸಿದ್ದರು.

ರಾಜ್ಯ ಕಾರ್ಯದರ್ಶಿ ಕಾ||ಎಸ್. ಶಿವರಾಂರವರು ಡಿ.ವೈ.ಎಫ್.ಐ. ಸ್ಥಾಪನೆಯ ಹಿನ್ನೆಲೆ, ರಾಷ್ಟ್ರದಲ್ಲಿನ ಪರಿಸ್ಥಿತಿಗಳನ್ನು ಸಂಕ್ಷಿಪ್ತವಾಗಿ ಹೇಳಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾ|ಎಂ.ಎನ್. ಉಗ್ರಪ್ಪರವರು "ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಯುವಜನರ ಪಾತ್ರ" ಎಂಬ ವಿಷಯದಲ್ಲಿ ಮಾತನಾಡಿದರು. ಐಕ್ಯರಂಗ ಪ್ರತಿಕೆಯ ಕಾ|ಜಿ.ಎನ್.ನಾಗರಾಜ್ ರವರು ಭಾಷೆ;ಸಂಸ್ಕೃತಿ ಮತ್ತು ನಿರುದ್ಯೋಗ ಈ ವಿಷಯವಾಗಿ ಉಪನ್ಯಾಸ ನೀಡಿದರು.

ಅರಮೇರಿ ಘಟಕದ ಕಾರ್ಯದರ್ಶಿ ಕಾ|| ಹೆಚ್. ಎನ್. ಗಣೇಶ್ ರವರು ಸ್ವಾಗತ ಬಯಸಿದರು. ರಾಜ್ಯ ಸಮಿತಿಯ ಸದಸ್ಯ ಕಾ|ಸ್ಟ್ಯಾನ್ಲಿವಾಸ್ ರವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕ್ ಸಮಿತಿಯ ಸದಸ್ಯೆ ಕಾ|ಪಾರ್ವತಿಅವರು ವಂದನಾರ್ಪಣೆ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಸಭೆ

ತ್ರಮಕೂರು ಜಿಲ್ಲೆಯ ಹಂಜಿನಾಳ ಗ್ರಾಮದಲ್ಲಿ ಎ. 25 ರಂದು ರೈತರ ಸಭೆ ನಡೆಯಿತು. ಶಿರಾ, ಗುಬ್ಬಿ, ತಿಪಟೂರು ಹಾಗೂ ತುಮಕೂರು ತಾಲ್ಲೂಕುಗಳ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಈ ಸಭೆಯಲ್ಲಿ ಪಾಲ್ಗೊಂಡರು. ಸಭೆಯನ್ನುದ್ದೇಶಿಸಿ ಕಾ|| ಕೆ.ಆರ್. ನಾಯಕ್ ಕಾ|| ಪಿ. ಜಗನ್ನಾಥ್, ಕಾ| ಬಿ. ಡಿ. ರಾಮಯ್ಯ, ಕಾ|| ಟಿ. ಕೆ. ಗೋವಿಂದರಾಜು ಮುಂತಾದವರು ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ರಾಜ್ಯಸರ್ಕಾರಕ್ಕೆ ನೀಡಿರುವ ಮನವಿಯನ್ನು ಪರಿಗಣಿಸಿ ಅದರಲ್ಲಿ ಉಲ್ಲೇಖಿಸಿರುವ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಅದರಲ್ಲೂ ಮುಖ್ಯವಾಗಿ ಬಗೈರ್ ಹುಕುಂ ಸಾಗುವಳಿ ಜಮೀನುಗಳನ್ನು ಬಡ ರೈತರಿಗೆ ಮಂಜೂರು ಮಾಡದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ಉಗ್ರ ಹೋರಾಟ ಅನಿವಾರ್ಯ ಎಂಬುದಾಗಿ ಸಭೆಯಲ್ಲಿ ತಿಳಿಸಲಾಯಿತು.

ನಂತರ ಸೀಬಿ ಅಗ್ರಹಾರ ಪಂಚಾಯ್ತಿ ವ್ಯಾಪ್ತಿಯ ರೈತ ಸಂಘದ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ಕಾ|| ನಂಜಪ್ಪ, ಉಪಾಧ್ಯಕ್ಷರಾಗಿ ಕಾ| ಚನ್ನಬಸವೇಗೌಡ ಸಂಚಾಲಕರಾಗಿ ಕಾ|| ಸಿ.ಆರ್. ನಂಜಪ್ಪ, ಕಾರ್ಯದರ್ಶಿಯಾಗಿ ಕಾ|| ನಂಜೇಗೌಡ, ಜಂಟಿ ಕಾರ್ಯದರ್ಶಿಯಾಗಿ ಕಾ|| ಕಾಂತರಾಜು ಆಯ್ಕೆಯಾದರು. ನಂತರ ಜಿಲ್ಲಾ ಕಾರ್ಯದರ್ಶಿ ಕಾ|| ಹೆಚ್.ಸಿ. ಚನ್ನಪ್ಪ ಹೊಸ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದರು.

○

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

1987, ಮೇ 29 ಮತ್ತು 30ರಂದು ಎಸ್. ಎಫ್. ಐ. ರಾಜ್ಯ ಸಮಿತಿ ಸಭೆಯನ್ನು ರಾಯಚೂರಿನ ರೈತ ಭವನದಲ್ಲಿ ಕರೆಯಲಾಗಿದೆ. 29ರಂದು ಬೆಳಿಗ್ಗೆ 10ಗಂಟೆಗೆ ಕಾರ್ಯದರ್ಶಿ ಮಂಡಳಿ ಸಭೆ ಮಧ್ಯಾಹ್ನ 3ಗಂಟೆಗೆ ರಾಜ್ಯಸಮಿತಿ ಸಭೆಯು ಆರಂಭವಾಗುತ್ತದೆ.

ರಾಜ್ಯ ಸಮಿತಿ ಸದಸ್ಯರುಗಳು ಲಿಖಿತ ವರದಿ ತರಬೇಕು.

ವಿಶೇಷ ಸೂಚನೆ : ರಾಜ್ಯಮಟ್ಟದ ಅಧ್ಯಯನ ಶಿಬಿರಕ್ಕೆ ಆಯ್ಕೆಮಾಡಬಹುದಾದ ಪ್ರಮುಖ ಕಾರ್ಯಕರ್ತರ ಸೂಚಿತ ಪಟ್ಟಿಯೊಂದನ್ನು ಇತರ ಪದಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸಿದ್ಧಪಡಿಸಿಕೊಂಡು ಬರಬೇಕಾಗಿ ವಿನಂತಿ. ಕನಿಷ್ಠ ಒಂದೆರಡು ವರ್ಷಗಳಕಾಲ ಸಂಘಟನೆಯಲ್ಲಿ ಸಕ್ರೀಯವಾಗಿ ಮುಂದುವರಿಯಬಹುದಾದ ಸಂಗಾತಿಗಳನ್ನು ಮಾತ್ರ ಒಳಗೊಂಡಿರಬೇಕು.

29.5.87ರಂದು ಮುಂಜಾನೆ ರಾಯಚೂರಿನ ಬಸ್‌ಮತ್ತು ರೈಲ್ವೆನಿಲ್ದಾಣದ ಬಳಿ ಸ್ವಯಂ ಸೇವಕರು ಕಾದಿರುತ್ತಾರೆ

ಸಖಾವು ಕೃಷ್ಣ ಪಿಳ್ಳೆಯವರ ಪ್ರೇಮ ವಿವಾಹ

ಒಂದುರೀತಿ ದಿಗ್ಭ್ರಮೆಯೇ ಆಯಿತು. ಆಕೆಯ ಓರಗೆಯವರು ಕೀಟಲೆಯ ನಗೆ ನಕ್ಕರು.

ಅಂದೇ ರಾತ್ರಿ ಆಕೆ ತಾನು ಜ್ಯೋತಿಷ್ಯಕಾರನನ್ನು ಭೇಟಿಯಾಗಿದ್ದನ್ನೂ ಆತ ಹೇಳಿದ್ದ ವಿವರಗಳನ್ನೂ ಒಂದು ಚೀಟಿಯಲ್ಲಿ ಬರೆದು ಅಯ್ಯನ್ ಪಿಳ್ಳೆಯ ಮುಖಾಂತರ ಕೃಷ್ಣ ಪಿಳ್ಳೆಯವರಿಗೆ ತಲುಪಿಸಿದಳು.

ಜ್ಯೋತಿಷ್ಯಕಾರನ ವೇಷದಲ್ಲಿ ಬಂದಿದ್ದ ವ್ಯಕ್ತಿ ಒಬ್ಬ ಗೂಢಚಾರ, ಶುದ್ಧ ಮೂರ್ಖರ ಹಾಗೆ ವರ್ತಿಸಬಾರದು, ಜಾಗೃತೆಯಿಂದ ಇರಬೇಕು, ಎಲ್ಲ ಮೂಲಪ್ರತಿಗಳನ್ನೂ ಒಡನೆಯೆ ನಾಶ ಮಾಡಬೇಕು, ಇಡಬೇಕಾದ ಪ್ರತಿಗಳನ್ನು ಹುಡುಕಿಕೊಂಡು ಬರುವ ಒಬ್ಬ ಸಂಗಾತಿಯ ಕೈಗೆ ಮುಟ್ಟಿಸಬೇಕು-

ಆ ವ್ಯಕ್ತಿಯೇ ಕೃಷ್ಣ ಪಿಳ್ಳೆಯೆಂದು ಅವಳಿಗೆ ಖಚಿತವಾಯಿತು. ಆಕೆ ಮೊತ್ತ ಮೊದಲ ಬಾರಿಗೆ ಕೃಷ್ಣ ಪಿಳ್ಳೆಯವರನ್ನು ಕಣ್ಣಾರೆ ಕಂಡಳು.

ಎಂದು ಕೃಷ್ಣ ಪಿಳ್ಳೆ ಬರೆದ ಉತ್ತರ ಕಂಡು ತಂಗಮ್ಮಾಗೆ ಪರಿಸ್ಥಿತಿಯ ಅರಿವಾಯಿತು. ಆಕೆ ಬರೆದಿದ್ದ ಕೆಲವು ಪತ್ರಗಳು ತಲುಪಬೇಕಾಗಿದ್ದವರಿಗೆ ತಲುಪಿಲ್ಲವೆಂಬುದೂ ಗೊತ್ತಾಯಿತು.

ಒಡನೆಯೇ ಕೃಷ್ಣ ಪಿಳ್ಳೆಯವರ ಸಲಹೆಯಂತೆ ಅವರ ಮೂಲ ಪ್ರತಿಗಳನ್ನೆಲ್ಲ ನಾಶ ಮಾಡಿದಳು. ತಾನು ನಕಲು ಮಾಡಿದ್ದ ಅಗತ್ಯವಾದ ಪ್ರತಿಗಳನ್ನು ಮಾತ್ರ ಇಟ್ಟುಕೊಂಡಳು. ಎಲ್ಲ ಕಡೆಗಳಲ್ಲೂ ಗೂಢಚಾರರು ತನ್ನ ಮೇಲೆ ಕಣ್ಣಿಟ್ಟಿರುವಂತೆ ಆಕೆಗೆ ಭಾಸವಾಗತೊಡಗಿತು.

ನಾಲ್ಕು ದಿನಗಳ ತರುವಾಯ ತಂಗಮ್ಮಾ ನಾಗರಕೊಯಿಲ್ ಕಡೆಗೆ ಹೋಗುತ್ತಿದ್ದಾಗ ನದಿಯ ಬಳಿ ಅನಪಾಳಮ್ ಗುಡ್ಡದ ಹತ್ತಿರ ಇಬ್ಬರು ಪೊಲೀಸರು ಒಬ್ಬ ಕೈದಿಯನ್ನು ಸ್ನಾನಕ್ಕೆ ಕೊಂಡೊಯ್ಯುತ್ತಿದ್ದುದನ್ನು ಕಂಡಳು. ಆ ವ್ಯಕ್ತಿಯೇ ಕೃಷ್ಣ ಪಿಳ್ಳೆಯೆಂದು ಅವಳಿಗೆ ಖಚಿತವಾಯಿತು.ಆಕೆ ಮೊತ್ತ ಮೊದಲ ಬಾರಿಗೆ ಕೃಷ್ಣ ಪಿಳ್ಳೆಯವರನ್ನು ಕಣ್ಣಾರೆ ಕಂಡಳು.

ಶಾಲೆ ತಲುಪುತ್ತಲೇ ಒಬ್ಬ ಅಪರಿಚಿತ ಆಕೆಯ ಆಗಮನವನ್ನೇ ನಿರೀಕ್ಷಿಸುತ್ತ ನಿಂತಿದ್ದ. ಆತ ತುಂಬ ಒರಟಾಗಿ ಇರುವಂತೆ ಆಕೆಗೆ ತೋರಿತು. ಆತನ ಮೆಲು ಧ್ವನಿಯೂ ಕರ್ಕಶವಾಗಿದ್ದಂತೆ ಅನಿಸಿತು.

"ಸಖಾವ್ ಕೃಷ್ಣ ಪಿಳ್ಳೆಯವರ ದಾಖಲೆ ಪತ್ರಗಳು ಎಲ್ಲಿ? ಕೊಟ್ಟುಬಿಡಿ," ಆತ ಹೇಳಿದ.

"ದಾಖಲೆ ಪತ್ರಗಳು ನನ್ನ ಬಳಿ ಇವೆ. ಆದರೆ ನೀನು ಕೃಷ್ಣ ಪಿಳ್ಳೆಯವರ ಮನುಷ್ಯನೆಂದು ನನಗೆ ಹೇಗೆ ಗೊತ್ತಾಗಬೇಕು?" ಆಕೆ ಕೇಳಿದಳು.

"ನೀವು ನನ್ನ ಗೊತ್ತುಮಾಡಿಕೊಳ್ಳಲು ಏನು ಉಪಾಯ ಯೋಚಿಸಿದ್ದೀರಿ?" ಅಪರಿಚಿತ ವ್ಯಕ್ತಿಯ ಪ್ರಶ್ನೆ.

"ಕೃಷ್ಣ ಪಿಳ್ಳೆಯವರನ್ನು ಕಾಣಬೇಕು. ಅವರು ಒಪ್ಪಿದರೆ ದಾಖಲೆ ಪತ್ರಗಳನ್ನು ನಿಮ್ಮ ಕೈಗೆ ಕೊಟ್ಟುಬಿಡುವೆ ಅಂದ ಹಾಗೆ ನಿಮ್ಮ ಹೆಸರು?"

"ಕುಟ್ಟನ್," ಅಪರಿಚಿತ ಹೇಳಿದ.

"ನಾಳೆ ಅನಪಾಳಮ್ ಗುಡ್ಡದ ಬಳಿ ಸ್ನಾನದ ಸ್ಥಳದ ಹತ್ತಿರ ಬನ್ನಿ. ಅಲ್ಲಿ ಸಂಗಾತಿ ಕಣ್ಣಿಗೆ ಬಿದ್ದರೂ ಬೀಳಬಹುದು," ಆಕೆ ಹೇಳಿದಳು.

"ಕುಟ್ಟನ್" ಎಂಬ ಹೆಸರಿನಲ್ಲಿ ಆಕೆಯನ್ನು ಭೇಟಿಯಾದ ವ್ಯಕ್ತಿ ಆಲೆಪ್ಪಿ ಮುಷ್ಕರಗಳ ಧುರೀಣ ಸಿ.ಒ. ಮ್ಯಾಥ್ಯೂ. ತಮ್ಮ ನಿಜವಾದ ಹೆಸರನ್ನು ಅವರು ಮರೆಮಾಚಬೇಕಾಗಿತ್ತು.

ಮಾರನೆಯ ದಿನ ಅನಪಾಳಮ್‌ಬಳಿ "ಕುಟ್ಟನ್" ವೇಷದಲ್ಲೇ ಸಿ.ಒ. ಮ್ಯಾಥ್ಯೂ ಬಂದರು. ತಂಗಮ್ಮಾ ಕೂಡಾ ಅಲ್ಲಿಗೆ ಬಂದು ಕೃಷ್ಣ ಪಿಳ್ಳೆಯವರ ನಿರೀಕ್ಷೆಯಲ್ಲಿ ನಿಂತಳು. ಸ್ನಾನ ಮಾಡಿಸಿಕೊಂಡು ಕೃಷ್ಣ ಪಿಳ್ಳೆಯವರನ್ನು ಪೊಲೀಸರು ಜೈಲಿಗೆ ಕರೆದುಕೊಂಡು ಹೋಗುತ್ತಿದ್ದಾಗ ಮ್ಯಾಥ್ಯೂ ಅವರನ್ನು ನೋಡಿದರು. ಕೃಷ್ಣ ಪಿಳ್ಳೆ ಮುಗುಳುನಗೆ ನಕ್ಕರು. ತನ್ನ ನಿರೀಕ್ಷೆಯಲ್ಲಿ ನಿಂತಿದ್ದ ಹುಡುಗಿಯನ್ನು ಅವರು ನೋಡಿದರು. ಆಕೆಯೇ ತಂಗಮ್ಮಳೆಂದು ಗುರುತಿಸಿದರು.

ಮಾರನೆಯ ದಿನ ಕೃಷ್ಣ ಪಿಳ್ಳೆ ಆಕೆಗೆ ಬರೆದ ಚೀಟಿಯಲ್ಲಿ ಮೊತ್ತ ಮೊದಲ ಬಾರಿಗೆ ಪ್ರೇಮದ ಬಗ್ಗೆ ಪ್ರಸ್ತಾಪವಿದ್ದಿತು.

"ನಿನ್ನೆ ನಾನು ನಿನ್ನನ್ನು ಮೊತ್ತ ಮೊದಲ ಬಾರಿಗೆ ನೋಡಿದೆ. ನೀನು ನೋಡಲು ಚೆನ್ನಾಗಿರುವಿ. ನಾನು ಕರಿಯ, ಕುರೂಪಿ ಎಂತಲೂ ಹೇಳಬಹುದು. ಆದರೂ ನೀನು ಒಪ್ಪುವುದಾದರೆ ನಿನ್ನನ್ನು ಮದುವೆಯಾಗಲು ನನಗೆ ಇಷ್ಟ. ನನ್ನ ಜೊತೆ ಬದುಕು ಕಷ್ಟ, ಎಲ್ಲರಿಗಿಂತ ಭಿನ್ನವಾಗಿರುವುದು ಸಾಮಾನ್ಯವಾಗಿ ಮನೆಯಲ್ಲಿ ಇರುವಂಥ ಶಾಂತವಾದ, ಸುಖಕರವಾದ ಬದುಕಂತೂ ಆಗಿರುವುದಿಲ್ಲ. ನನ್ನ ಹೆಂಡತಿಯಾಗುವವಳು ಯಾವಾಗಲೂ ನನ್ನ ಜೊತೆ, ನನ್ನ ಪಕ್ಷದ ಜೊತೆ ಇರಬೇಕಾಗುತ್ತದೆ. ಪಕ್ಷದ ಧ್ಯೇಯ ಸಾಧನೆಗಾಗಿ ಹೋರಾಡಬೇಕಾಗುತ್ತದೆ. ಆಗ ಮಾತ್ರವೆ ಅವಳು ತೃಪ್ತಿಯಿಂದ ಇರಬಲ್ಲಳು," ಕೃಷ್ಣ ಪಿಳ್ಳೆ ಬರೆದಿದ್ದರು. ವೈಚಾರಿಕವಾಗಿ ತಂಗಮ್ಮಾ ಆಗಲೇ ಸಾಕಷ್ಟು ಪ್ರಬುದ್ಧಳಾಗಿದ್ದಳಾದರೂ ಈ ವಿಷಯದಲ್ಲಿ ಕೃಷ್ಣ ಪಿಳ್ಳೆಯವರಿಗೆ ಏನು ಹೇಳಬೇಕೆಂಬುದೇ ತಿಳಿಯದಾದಳು.

ಸಿ. ಒ. ಮ್ಯಾಥ್ಯೂ ಅವರಿಗೆ ಈ ಸಂಬಂಧ ಸರಿಬೀಳಲಿಲ್ಲ. ತಂಗಮ್ಮಾಳ ಜೊತೆಯ ವ್ಯವಹಾರವನ್ನು ಅಷ್ಟಕ್ಕೇ ನಿಲ್ಲಿಸಿದರೆ ಪಾರ್ಟಿಗೂ ಒಳ್ಳೆಯದು. ಕೃಷ್ಣ ಪಿಳ್ಳೆಯವರಿಗೂ ಒಳ್ಳೆಯದು ಎಂದು ತಿಳಿಸಿ ಒಂದು ದೀರ್ಘವಾದ ಚೀಟಿ ಬರೆದು ಜೈಲಿನಲ್ಲಿದ್ದ ಸಖಾವಗೆ ತಲುಪಿಸಿದರು. ಕೃಷ್ಣ ಪಿಳ್ಳೆಯವರು ಆ ಪತ್ರಕ್ಕೆ ಉತ್ತರ ಬರೆದು, ಅದರ ಜೊತೆಗೆ ತಂಗಮ್ಮಾಳ ಹೆಸರಿನಲ್ಲೂ ಒಂದು ಚೀಟಿ ಬರೆದು ಎರಡನ್ನೂ ತಂಗಮ್ಮನ ಕೈಗೇ ತಲುಪಿಸಿದರು. ಮ್ಯಾಥ್ಯೂ ಅವರಿಗೆ ಬರೆದಿದ್ದ ಚೀಟಿಯನ್ನು ತಲಪಿಸುವ ಜವಾಬ್ದಾರಿ ಆಕೆಯೇ ಹೊರಬೇಕಾಗಿತ್ತು.

"ಮ್ಯಾಥ್ಯೂ ಬಗ್ಗೆ ತಪ್ಪು ತಿಳಿದುಕೊಳ್ಳಬೇಡ. ಆತ ನಿನ್ನನ್ನು ಸರಿಯಾಗಿ ತಿಳಿದುಕೊಂಡಿಲ್ಲ." ಎಂದು ತಂಗಮ್ಮಾಗೆ ಬರೆದ ಚೀಟಿಯಲ್ಲಿ ಸಖಾವು ತಿಳಿಸಿದ್ದರು. ಮ್ಯಾಥ್ಯೂ ಅವರಿಗೆ ಬರೆದ ಚೀಟಿಯಲ್ಲಿ ಸಖಾವು ಹೀಗೆ ಹೇಳಿದ್ದರು; "ನಿನ್ನ ಉಪದೇಶ ನನಗೆ ಬೇಕಾಗಿಲ್ಲ. ನಾನು ಈ ಸಂಬಂಧ ಬೆಳೆಸುವಾಗಲೇ ಯಾರ ಅನುಮತಿಯನ್ನೂ ಪಡೆದಿರಲಿಲ್ಲ. ನಾಲ್ಕು ತಿಂಗಳುಗಳ ಪತ್ರ ವ್ಯವಹಾರದ ನಂತರ ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ. ಹುಡುಗಿಯನ್ನು ನಾನು ಚೆನ್ನಾಗಿ ಬಲ್ಲೆ. ದಯವಿಟ್ಟು ಈ ವಿಷಯದಲ್ಲಿ ತಲೆ ಹಾಕಬೇಡ."

ತಂಗಮ್ಮಾ ಆ ಚೀಟಿಗಳನ್ನು ಮ್ಯಾಥ್ಯೂ ಅವರಿಗೆ ಕೊಟ್ಟಳು. ಮ್ಯಾಥ್ಯೂ ಅವರಿಗೆ ತುಂಬಾ ಬೇಸರವೆನಿಸಿತು. "ಯಾಕಾದರೂ ನಾನು ಹೀಗೆ ಮಾಡಿದೆ?" ಎಂದು ಪಶ್ಚಾತ್ತಾಪ ಪಟ್ಟರು. "ಕ್ಷಮಿಸು, ಅಕ್ಕಾ," ಎಂದು ಗೌರವ ಭಾವದಿಂದ ಆಕೆಯ ಕ್ಷಮೆ ಕೋರಿದರು. ಪ್ರಾಯಶಃ ಆ ಮಾತಿನಲ್ಲೇ ಮದುವೆಗೆ ತಮ್ಮ ಅಭ್ಯಂತರವಿಲ್ಲವೆಂಬ ಸೂಚನೆಯನ್ನೂ ಸೂಚಿಸಿದ್ದರು.

ಇಷ್ಟು ಹೊತ್ತಿಗೆ ತಂಗಮ್ಮಳ ವ್ಯವಹಾರವೆಲ್ಲ ಗೊತ್ತಾಗಿ ಆಕೆಯ ತಾಯಿ ತಂದೆ ಅವಳನ್ನು ಚೆನ್ನಾಗಿ ಥಳಿಸಿದರು. ಎಲ್ಲಿ ತನ್ನನ್ನು ಪತ್ತೆ ಹಚ್ಚಿ, ಹೊಡೆಯುವರೊ ಎಂಬ ಭೀತಿಯಿಂದ ಅಯ್ಯನ್ ಪಿಳ್ಳೆ ಆ ಊರನ್ನೇ ಬಿಟ್ಟು ಹೋದ. ಕೆಲವು ದಿನಗಳ ತರುವಾಯ ಆತ ಸೈನ್ಯದಲ್ಲಿ ಸೇರ್ಪಡೆಯಾದ.

ಕ್ರಿಪ್ಸ್ ನಿಯೋಗದ ತರುವಾಯದ ಬೆಳವಣಿಗೆಗಳ ಪರಿಣಾಮವಾಗಿ ಮತ್ತು 1941ರಲ್ಲಿ ಸೋವಿಯತ್ ಒಕ್ಕೂಟದ ಮೇಲೆ ನಡೆದ ಜರ್ಮನಿಯ ದಾಳಿಯ ಪರಿಣಾಮವಾಗಿ ಭಾರತದಲ್ಲಿನ ರಾಜಕೀಯ ಪರಿಸ್ಥಿತಿಯೂ ಬದಲಾಗಿತ್ತು. ಜರ್ಮನಿಯ ಮೇಲೆ ಸೋವಿಯತ್ ಒಕ್ಕೂಟ ದೇಶಾಭಿಮಾನೀ ಯುದ್ಧವನ್ನು ಘೋಷಿಸಿತ್ತು. ಅಂತಲೇ ಫಾಸಿಸ್ಟ್ ಶಕ್ತಿಗಳ ವಿರುದ್ಧ ಸೋವಿಯತ್ ಒಕ್ಕೂಟದ ನ್ಯಾಯವಾದ ಸಮರ ಆರಂಭವಾಗಿತ್ತು. ಹಿಟ್ಲರನ ವಿರುದ್ಧದ ಯುದ್ಧವನ್ನು ಫಾಸಿಸ್ಟ್-ವಿರೋಧಿ ಯುದ್ಧವೆಂದು ಕಮ್ಯುನಿಸ್ಟ್ ಪಕ್ಷ ಘೋಷಿಸಿದ್ದಿತು. ಈ ಹಿನ್ನೆಲೆಯಲ್ಲಿ, 1942ರ ಮಾರ್ಚ್ ತಿಂಗಳಿನಲ್ಲಿ ಕೃಷ್ಣ ಪಿಳ್ಳೆಯವರನ್ನು ಎಡಲಕುಡಿ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಜೈಲಿನಿಂದ ಹೊರಬರುತ್ತಲೇ ಕೃಷ್ಣ ಪಿಳ್ಳೆಯವರು ಸುಚೀಂದ್ರಮ್‌ಗೆ ಹೋದರು. ತಂಗಮ್ಮಾಳ ಮನೆಯನ್ನು ಹುಡುಕಿದರು. ತಂಗಮ್ಮಾ ಮನೆಯಲ್ಲಿ ಇರಲಿಲ್ಲ. ಸಿನಿಮಾಕ್ಕೆ ಹೋಗಿದ್ದಳು. ತಂಗಮ್ಮಾಳ ತಾಯಿ ಕೃಷ್ಣ ಪಿಳ್ಳೆಯವರನ್ನು ಕಂಡು ರೊಚ್ಚಿಗೆದ್ದಳು. ಬಾಯಿಗೆ ಬಂದಂತೆ ಬೈದುಬಿಟ್ಟಳು. ಅಷ್ಟರಲ್ಲಿ ಕೃಷ್ಣ ಪಿಳ್ಳೆಯವರು ಮನೆಗೆ ಬಂದಿದ್ದ ಸುದ್ದಿ ತಿಳಿದು ತಂಗಮ್ಮಾ ಥಿಯೇಟರಿನಿಂದ ಓಡಿ ಬಂದಳು. ಅವಳ ಮೇಲೂ ತಾಯಿ ಬೈಗಳುಗಳ ಮಳೆಗರೆದಳು. ಮತ್ತೆ ಬರುವುದಾಗಿ ಕೃಷ್ಣ

"ಒಳ್ಳೆಯ ಹನಿಮೂನ್ ಆಯ್ತು, ಅಲ್ವಾ?" ಎಂದು ಕೃಷ್ಣ ಪಿಳ್ಳೆ ಎರಡನೆಯ ದಿನ ತಂಗಮ್ಮಾಳ ಕಿವಿಯಲ್ಲಿ ಮೆಲ್ಲನೆ ಹೇಳಿದರು.

ಪಿಳ್ಳೆ ಅಲ್ಲಿಂದ ಹೊರಟು ಹೋದರು. ದೇವಸ್ಥಾನದಲ್ಲಿ ಆಕೆಯ ತಂದೆಯನ್ನು ಕಂಡು ತಮ್ಮ ಇಚ್ಛೆಯನ್ನು ಅವರಿಗೆ ಸ್ಪಷ್ಟವಾಗಿ ಹೇಳಿಬಿಟ್ಟರು.

ಮಾರನೆಯ ದಿನವೇ ಸಬ್‌ರೆಜಿಸ್ಟ್ರಿ ಆಫೀಸಿನಲ್ಲಿ ತಂಗಮ್ಮಾಳ ಜೊತೆ ಮದುವೆ ಮಾಡಿಕೊಂಡರು. ಮದುವೆಯಾದ ತರುವಾಯ ಅಲ್ಲಿಂದ ತಿರುವನಂತಪುರಕ್ಕೆ ಹೆಂಡತಿಯನ್ನು ಕರೆದುಕೊಂಡು ಹೋದರು. ತಿರುವನಂತಪುರದಲ್ಲಿ ಪೊನ್ನರ ಶ್ರೀಧರನ್ ಮತ್ತು ಇತರ ಮಿತ್ರರು ಅವರ ಹಾದಿ ನೋಡುತ್ತ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಕೃಷ್ಣ ಪಿಳ್ಳೆ ತಮ್ಮ ಪತ್ನಿ ತಂಗಮ್ಮಾಳ ಸಮೇತ ಎರಡು ದಿನ ಪೊನ್ನರ ಶ್ರೀಧರನ್ ಮನೆಯಲ್ಲೇ ಉಳಿದುಕೊಂಡರು. ಎರಡೂ ದಿನಗಳು ನಿರಂತರ ರಾಜಕೀಯ ಚರ್ಚೆಗಳಲ್ಲೇ ಕಳೆದುಹೋದುವು.

"ಒಳೆಯ ಹನಿಮೂನ್ ಆಯ್ತು, ಅಲ್ವಾ?" ಎಂದು ಕೃಷ್ಣ ಪಿಳ್ಳೆ ಎರಡನೆಯ ದಿನ ತಂಗಮ್ಮಾಳ ಕಿವಿಯಲ್ಲಿ ಹೇಳಿದರು.

ರೈತರನ್ನು ಒಕ್ಕಲೆಬ್ಬಿಸುವ ಸರ್ಕಾರಕ್ಕೆ ಧಿಕ್ಕಾರ

ಕರ್ನಾಟಕ ಪ್ರಾಂತ ರೈತ ಸಂಘದ ಕರ್ನಾಟಕ ರಾಜ್ಯ ಸಮಿತಿಯ ಸಭೆ 18 ಮತ್ತು 19ರಂದು ಕಾ॥ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹತ್ತಾರು ವರ್ಷಗಳಿಂದ 'ಸಿ, ಮತ್ತು 'ಡಿ, ವರ್ಗದ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿರುವ ಬಡರೈತರು ಮತ್ತು ಕೃಷಿ ಕಾರ್ಮಿಕರನ್ನು ಒಕ್ಕಲೆಬ್ಬಿಸಲು ಅರಣ್ಯ ಇಲಾಖೆ ಮತ್ತು ಪೋಲೀಸ್ ಇಲಾಖೆ ತೀವ್ರ ಪ್ರಯತ್ನ ನಡೆಸುತ್ತಿರುವ ಹಿನ್ನಲೆಯಲ್ಲಿ "ಸಾಗುವಳಿ ಮಾಡುತ್ತಿರುವ ಸರಕಾರೀ ಭೂಮಿಯ ಸ್ವಾಧೀನ ಬಿಡಬೇಡಿ" ಎಂಬುದಾಗಿ ಪ್ರಾಂತ ರೈತ ಸಂಘವು ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಕರೆ ನೀಡಿದೆ.

ಮೊನ್ನೆ ಮೊನ್ನೆಯವರೆಗೆ ಕಂದಾಯ ಇಲಾಖೆಯ ವಶದಲ್ಲಿದ್ದ ಭೂಮಿಯನ್ನು ಬಗರ ಹುಕುಂ ಸಾಗುವಳಿದಾರರಿಗೆ ನೀಡುತ್ತೇವೆ ಎಂದು ಆಸೆ ತೋರಿಸುತ್ತಾ ಬರುತ್ತಿದ್ದ, ರಾಜ್ಯ ಸರ್ಕಾರ ಇದ್ದಕ್ಕಿದ್ದಂತೆ ಈ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿ ಲಕ್ಷಾಂತರ ಬಡ ಜನರಿಗೆ ಅನ್ಯಾಯವೆಸಗಿದೆ ಇದನ್ನು ಸಭೆಯು ಖಂಡಿಸಿ ಒಕ್ಕಲೆಬ್ಬಿಸುವ ಪ್ರಯತ್ನಗಳನ್ನು ಕೂಡಲೇ ನಿಲ್ಲಿಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದೆ.

ನೀರು ತುಂಬದ ಕೆರೆಗಳ ಅಚ್ಚುಕಟ್ಟಿನಲ್ಲಿ ಅನೇಕ ವರ್ಷಗಳಿಂದ ನೀರೇ ಕಾಣದ ಭೂಮಿಯನ್ನು ಪ್ರತಿ ವರ್ಷವೂ ನೀರಾವರಿಯಾಗಿದೆಯೆಂದು ಸುಳ್ಳು ದಾಖಲೆ ಸೃಷ್ಟಿಸಿ ನೀರು ತೆರಿಗೆಯನ್ನು ವಿಧಿಸಲಾಗುತ್ತಿದೆ ಮತ್ತು ಇದನ್ನು ಬಲಾತ್ಕಾರವಾಗಿ ವಸೂಲಿ ಮಾಡುವ ಪ್ರಯತ್ನ ನಡೆಯುತ್ತಿದೆ. ಬರಗಾಲದಿಂದಾಗಿ ಮೂರ್ನಾಲ್ಕು ವರ್ಷಗಳಿಂದ ಮುಂದೂಡಿದ್ದ ಭೂಕಂದಾಯ ಸಾಲ ವಸೂಲಿಯನ್ನು ಈಗ ಒಮ್ಮೆಗೇ ವಸೂಲಿ ಮಾಡಲು ಅಧಿಕಾರಿಗಳಿಗೆ ಸರ್ಕಾರ ಆದೇಶ ನೀಡಿದೆ. ಅಧಿಕಾರಿಗಳು ಜೀಪುಗಳಲ್ಲಿ ಬಂದು ಬಡ ರೈತರನ್ನು ಹಿಂಸಿಸುತ್ತಿದಾರೆ. ಇಂತಹ ಬಲಾತ್ಕಾರ ಸಾಲ ವಸೂಲಿಯನ್ನು ಕೂಡಲೇ ನಿಲ್ಲಿಸ ಬೇಕೆಂದು ರಾಜ್ಯ ಸಮಿತಿ ಒತ್ತಾಯ ಪಡಿಸಿದೆ.

ಬಳಕೆದಾರರಿಗೆ ಲೀಟರಿಗೆ 50 ಪೈಸೆಯಂತೆ ಹಾಲಿನ ದರವನ್ನು ಏರಿಸಿದ ರಾಜ್ಯ ಸರ್ಕಾರ ರೈತರಿಂದ ಕೊಳ್ಳುವ ಹಾಲಿಗೆ ಮಾತ್ರ 10 ಪೈಸೆ ಜಾಸ್ತಿ ಮಾಡಿದೆ. ರೈತರಿಂದ ಕೊಳ್ಳುವ ಹಾಲಿನ ಬೆಲೆಯನ್ನು ಏರಿಸಿ ರೈತರಿಗೆ ಆಗುತ್ತಿರುವ ನಷ್ಟವನ್ನು ಭರ್ತಿಮಾಡಬೇಕೆಂದು ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಬೇಡಿಕೆಗಳನ್ನು ಒತ್ತಾಯಿಸಿ ರೈತರ ಮೆರವಣಿಗೆ

ಕರ್ನಾಟಕ ಪ್ರಾಂತ ರೈತ ಸಂಘದ ಇಂಡಿ ತಾಲೂರು ಘಟಕವು ತುರ್ತು ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಏಪ್ರಿಲ್ 13 ರಂದು ಬೃಹತ್ ಮೆರವಣಿಗೆ ನಡೆಸಿತು. ಇದರ ನೇತೃತ್ವವನ್ನು ರೈತ ಸಂಘದ ಕಾರ್ಯದರ್ಶಿ ಕಾ॥ವಿ.ಯು ಹಾದಿಮನಿ ವಹಿಸಿದ್ದರು. ಮುಳವಾಡ ಯಾತ ನೀರಾವರಿ ಆಗಲೇಬೇಕು. ಬರಗಾಲ ಕಾಮಗಾರಿ ಪ್ರಾರಂಭಿಸಬೇಕು ಭೀಮಾನದಿ ನೀರು ಪೂರೈಕೆಯಾಗಬೇಕು ಸಾಲ ಮನ್ನಾ ಮಾಡಿ ಸಾಲ ವಸೂಲಿ ಜಪ್ತಿ ನಿಲ್ಲಿಸಬೇಕು ಹೊಸ ಸಾಲ ನೀಡಬೇಕು. ಭ್ರಷ್ಟಚಾರಿಗಳಿಗೆ ಧಿಕ್ಕಾರ ಮುಂತಾದ ಘೋಷಣೆಗಳನ್ನು ಪ್ರದರ್ಶನಕಾರರು ಕೂಗುತ್ತಿದ್ದರು. ಅಸಿಸ್ಟೆಂಟ್ ಕಮಿಷನರ್ ಅವರ ಕಚೇರಿಗೆ ತೆರಳಿದ ಮೆರವಣಿಗೆಕಾರರು ತಹಸೀಲ್ದಾರರವರಿಗೆ ಮನವಿ ಅರ್ಪಿಸಿ ಬೇಡಿಕೆಗಳನ್ನು ತುರ್ತಾಗಿ ಈಡೇರಿಸಬೇಕೆಂದು ಒತ್ತಾಯಿಸಿದರು.

RGE No. BGW-148 MAG (2) PRB DECR 319/78-79

ತಮಿಳುನಾಡು : ಬೆಂಕಿ ಪೆಟ್ಟಿಗೆ ಉದ್ಯಮಗಳ ಬೀಗಮುದ್ರೆ

5 ಲಕ್ಷ ಕಾರ್ಮಿಕರು ಬೀದಿಯ ಮೇಲೆ

ತಮಿಳುನಾಡಿನ ನೆಲ್ಲೈ ಮತ್ತು ಕಾಮರಾಜರ್ ಜಿಲ್ಲೆಗಳ ಸುಮಾರು 10ಸಾವಿರ ಬೆಂಕಿಪೆಟ್ಟಿಗೆ ತಯಾರಿಸುವ ಗುಡಿ ಕೈಗಾರಿಕೆಗಳು ಮಾರ್ಚ್ 23 ರಿಂದ ಮುಚ್ಚಲ್ಪಟ್ಟಿವೆ. ಇದರಿಂದಾಗಿ ಸುಮಾರು 5 ಲಕ್ಷ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಬೀದಿಯ ಮೇಲೆ ಬಿದ್ದಿದ್ದಾರೆ. ಕೋವಿಲ್‌ಪಟ್ಟಿ, ಸಾತೂರ್, ಶಿವಕಾಶಿ ಪ್ರದೇಶಗಳಲ್ಲಿ ಬೆಂಕಿಪೆಟ್ಟಿಗೆ ಉದ್ಯಮ ಒಂದು ಗೃಹ ಕೈಗಾರಿಕೆಯಾಗಿ ಬೆಳೆದಿದೆ. ಇಲ್ಲಿನ ಮನೆ ಮನೆಗಳಲ್ಲೂ ಕುಟುಂಬದ ಎಲ್ಲಾ ಸದಸ್ಯರೂ ಇದರಲ್ಲಿ ದುಡಿಯುತ್ತಿದ್ದಾರೆ. ಬೆಂಕಿಪೆಟ್ಟಿಗೆ ತಯಾರಿಸಲು ಬೇಕಾಗುವ ಕಚ್ಚಾ ಪದಾರ್ಥಗಳ ಬೆಲೆ ವಿಪರೀತ ಏರಿದ್ದು ಕೆಲವು ಬೃಹತ್ ಉದ್ಯಮಿಗಳೊಂದಿಗೆ ಇವರು ಸ್ಪರ್ಧಿಸಬೇಕಾದ ಪರಿಸ್ಥಿತಿಯಿದೆ. ಇಲ್ಲಿ ತಯಾರಾಗುವ ಬೆಂಕಿಪೆಟ್ಟಿಗೆಗಳು ಹೆಚ್ಚಾಗಿ ಉತ್ತರದ ರಾಜ್ಯಗಳಿಗೆ ಲಾರಿಗಳ ಮಾಲೀಕರು ಸಾಗಾಣಿಕೆ ದರವನ್ನು ತೀವ್ರವಾಗಿ ಹೆಚ್ಚಿಸಿರುವುದರಿಂದ ತಮ್ಮ ಉದ್ಯಮಗಳನ್ನು ಮುಚ್ಚಬೇಕಾದ ಪರಿಸ್ಥಿತಿಯೊದಗಿದೆಯೆಂದು ಸಣ್ಣ ಉದ್ಯಮಿಗಳು ತಿಳಿಸಿದ್ದಾರೆ.

ಲಾರಿ ಮಾಲೀಕರು ಮಾರ್ಚ್ 6ರಿಂದ ಸಾಗಾಣಿಕೆ ವೆಚ್ಚವನ್ನು ಏಕಪಕ್ಷೀಯವಾಗಿ ವಿಪರೀತ ಏರಿಸಿರುವುದಲ್ಲದೆ ಅನೇಕ ನಿರ್ಬಂಧಗಳನ್ನು ಹೇರಿದ್ದಾರೆ. ಈ ಬಗ್ಗೆ ಬೆಂಕಿಪೆಟ್ಟಿಗೆ ಉದ್ಯಮಿಗಳ ಸಂಘವು ಲಾರಿ ಮಾಲೀಕರೊಂದಿಗೆ ಮಾತುಕತೆ ನಡೆಸಿದ್ದರೂ ಏನೂ ಫಲಕಾರಿಯಾಗಿಲ್ಲ, ಉತ್ಪಾದನೆಯಾಗಿರುವ ಸರಕುಗಳು ಮಾರುಕಟ್ಟೆಯನ್ನು ತಲುಪಲು ಸಾಧ್ಯವಾಗದೆ ಹೂಡಿದ್ದ ಬಂಡವಾಳಗಳಲ್ಲೂ ಸ್ಥಗಿತಗೊಂಡು ಉದ್ಯಮಗಳನ್ನು ಮುಚ್ಚಲೇ ಬೇಕಾದ ಪರಿಸ್ಥಿತಿಯೊದಗಿದೆಯೆಂದು ಸಂಘವು ಪ್ರಕಟನೆಯಲ್ಲಿ ತಿಳಿಸಿದೆ.

ಕೇಂದ್ರಸರ್ಕಾರದ ಹೊಸ ತೆರಿಗೆಗಳಿಂದಾಗಿ, ಮೋಟಾರು ವಾಹನಗಳ ಬಿಡಿಭಾಗಗಳ ಬೆಲೆ ಏರಿಕೆಯಿಂದಾಗಿ ಮತ್ತು ಸರಕು ಸಾಗಣೆ ವಾಹನಗಳ ಮೇಲೆ ತಮಿಳುನಾಡು ಸರ್ಕಾರ ಹೆಚ್ಚಿನ ತೆರಿಗೆ ವಿಧಿಸಿರುವುದರಿಂದ ಸಾಗಾಣಿಕೆ ದರವನ್ನು ಏರಿಸಲೇ ಬೇಕಾದ ಅನಿವಾರ್ಯತೆ ಉಂಟಾಗಿದೆಯೆಂದೂ ಲಾರಿ ಮಾಲೀಕರ ಸಂಘ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಹೊತ್ತಿ ಉರಿಯುತ್ತಿರುವ ಬೆಂಕಿಪೆಟ್ಟಿಗೆ ಉದ್ಯಮದ ಸಮಸ್ಯೆಯ ಜೊತೆಗೆ ಈ ಪ್ರದೇಶಗಳಲ್ಲಿ ತೀವ್ರವಾದ ಬರಗಾಲ ಪ್ರಾರಂಭವಾಗಿದೆ. ಬೆಂಕಿಪೆಟ್ಟಿಗೆ ಉದ್ಯಮವನ್ನು ನಂಬಿಕೊಂಡು ಬದುಕುತ್ತಿದ್ದ ಗ್ರಾಮೀಣ ಪ್ರದೇಶಗಳ ಬಹುಪಾಲು ಕುಟುಂಬಗಳು ಈಗ ಅನ್ನಕ್ಕಾಗಿ ಹಾಹಾಕಾರ ನಡೆಸುತ್ತಿವೆ.

ತುಂಬಾ ಗಂಭೀರ ಸ್ವರೂಪ ಮುಟ್ಟುತ್ತಿರುವ ಈ ಸಮಸ್ಯೆಗೆ ಸರ್ಕಾರ ಸೂಕ್ತವಾದ ಪರಿಹಾರ ಒದಗಿಸಿ ಲಕ್ಷಾಂತರ ಬಡ ಜನರ ಉದ್ಯೋಗವನ್ನು ರಕ್ಷಿಸಬೇಕೆಂದು ಬೆಂಕಿಪೆಟ್ಟಿಗೆ ಉದ್ಯಮಿಗಳ ಸಂಘ ಸರ್ಕಾರವನ್ನು ಆಗ್ರಹಪಡಿಸಿದೆ. ●

ವಿದ್ಯುತ್ ಕಡಿತ ಅನಿವಾರ್ಯವೇ ?

(3ನೇ ಪುಟದಿಂದ)

ಯಿಂದ 7ನೇಯೋಜನೆಯ ಅವಧಿಗೆ ಪ್ರತಿ ಮೆಘಾವಾಟ್ ಉತ್ಪಾದನೆಗೆ ಬೇಕಾದ ಬಂಡವಾಳ ಎರಡು ಪಟ್ಟು ಹೆಚ್ಚಿದೆ- ಇದಕ್ಕೆ ಮುಖ್ಯ ಕಾರಣ– ವಿದುತ್ ಉತ್ಪಾದನಾ ಯಂತ್ರಗಳ ತಯಾರಿಯಲ್ಲಿ ಹೆಚ್ಚು ಕಡಿಮೆ ಸ್ವಾವಲಂಬನ ಸಾಮರ್ಥ್ಯ ಸ್ಥಾಪಿಸಿದ್ದ B-HETಗೆ ಬದಲಾಗಿ ವಿಶ್ವ ಬ್ಯಾಂಕ್ ಮುಂತಾದ ಆರ್ಥಿಕ ಸಂಸ್ಥೆಗಳ ಒತ್ತಡದಿಂದಾಗಿ ವಿದ್ಯುದುತ್ಪಾದನಾ ಯಂತ್ರಗಳ ದುಬಾರಿ ಆಮದು ಈ ಅವಧಿಯಲ್ಲಿ ಹೆಚ್ಚಾದದ್ದು ಅಲ್ಲದೆ ಹೊಸ ಆರ್ಥಿಕ ನೀತಿಯಿಂದ ಉಂಟಾಗಿರುವ ಒಟ್ಟಾರೆ ಆರ್ಥಿಕ ಸಂಪನ್ಮೂಲಗಳ ಅಭಾವ ಇದಲ್ಲದೆ ಕೇಂದ್ರ—ರಾಜ್ಯಗಳ ನಡುವಣ ವಿಷಮ ಆರ್ಥಿಕ ಸಂಬಂಧಗಳು ರಾಜ್ಯ ಸರಕಾರದ ಸಂಪನ್ಮೂಲಗಳ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ ವಿಶ್ವಬ್ಯಾಂಕ್‌ನ ಒತ್ತಡದಿಂದಲೇ ವಿದ್ಯುತ್ ದರ ಏರಿಸಲಾಗುತ್ತಿದೆ.

ಹೀಗೆ ವಿದ್ಯುತ್ ಉತ್ಪಾದನೆ, ಉತ್ಪಾದನಾ ಸಾಮರ್ಥ್ಯದ ಹೆಚ್ಚಳದಿಂದಾಗಿ ಆಗುವುದರಿಂದ ಬಳಕೆಯಲ್ಲಿ ಪೋಲನ್ನು ಕಡೆಯುವುದರಿಂದ ವಿದ್ಯುತ್ತಿನ ಬೆಲೆಯೂ ಕಡಿಮೆ.

ವಿದ್ಯುತ್ ಕ್ಷಾಮದ ಪರಿಣಾಮಗಳು ನೇರವಾಗಿ ಕಾಣುವಂತಹುದು. ಸತತ ವಿದ್ಯುತ್ ಕಡಿತದಿಂದಾಗಿ ಹಲವು ಕಾರ್ಖಾನೆಗಳು ತಮ್ಮ ಪೂರ್ಣ ಸಾಮರ್ಥ್ಯದ ಉತ್ಪಾದನೆ ಮಾಡಲು ಸಾಧ್ಯವಾಗಿಲ್ಲ. ಸಾವಿರಾರು ಸಣ್ಣ ಮಧ್ಯಮ ಕೈಗಾರಿಕೆಗಳು ಲೇ!! ಆಫ್ ಮಾಡಿ ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಹಲವು ಕಾರ್ಖಾನೆಗಳು ಮುಚ್ಚಿವೆ. ವಿದ್ಯುತ್ ಕ್ಷಾಮದ ಪರಿಸ್ಥಿತಿಯಿಂದ ಕೈಗಾರಿಕಾ ಉತ್ಪನ್ನದಲ್ಲಿ ಸುಮಾರು 100 - 150 ಕೋಟಿ ರೂ:ಗಳ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಇದಲ್ಲದೆ ವಿದ್ಯುತ್ ಕ್ಷಾಮದ ಪರಿಸ್ಥಿತಿಯಿಂದಾಗಿ ಗ್ರಾಮಗಳ ವಿದ್ಯುದೀಕರಣ, ಕೃಷಿ ನೀರಾವರಿ ಪಂಪುಸೆಟ್ಟುಗಳ ಯೋಜನೆಗೆ ತೀವ್ರ ಹೊಡೆತ ಬಿದ್ದಿದೆ. ರಾಜ್ಯಸರ್ಕಾರ ಈ ಯೋಜನೆಗಳ ಮೇಲೆ ಬಹಳಷ್ಟು ಷರತ್ತುಗಳನ್ನು ಹೇರಿ ದುಬಾರಿಗೊಳಿಸಿದೆ. ವಿದ್ಯುತ್ ಹೆಚ್ಚಿನ ಹಳ್ಳಿಗಳನ್ನು ತಲಪಿದ್ದರೂ ಶೇ. 20ಮನೆಗಳಲ್ಲಿ ಮಾತ್ರ ವಿದ್ಯುತ್ ಬಳಕೆಯಾಗುತ್ತಿದೆ. ನೀರಾವರಿ ಪಂಪುಸೆಟ್ಟಿಗೆ ವಿದ್ಯುತ್ ಬಳಕೆ ಸಹ ಪಂಜಾಬು (ಶೇ.30) ಮುಂತಾದ ರಾಜ್ಯಗಳಿಗೆ ಹೋಲಿಸಿದರೆ ಅತಿಕಡಿಮೆ.

ಆದ್ದರಿಂದ ವಿದ್ಯುತ್ ಕ್ಷಾಮ ಹೋಗಲಾಡಿಸುವ ಯೋಜನಾಬದ್ಧ ಕ್ರಮಗಳನ್ನು ಒತ್ತಾಯಿಸುವುದು, ವಿದ್ಯುತ್ ಉತ್ಪಾದನೆಯ ವ್ಯಾಪಾರೀಕರಣ, ಖಾಸಗೀಕರಣದ ವಿರುದ್ಧ ಪ್ರತಿಭಟನೆ, ಕೇಂದ್ರ–ರಾಜ್ಯ ಆರ್ಥಿಕ ಸಂಬಂಧಗಳ ಪುನರ್ರಚನೆಗೆ ಒತ್ತಾಯ ತರುವುದು ಎಡ ಚಳುವಳಿಯ ಕಾರ್ಯಕ್ರಮವಾಗಬೇಕು. ○

ಪ್ರಧಾನಿ ಮನೆಗೆ ಯುವಕರ ಜಾಥಾ

ಮೇ 18ರಂದು ನವ ದೆಹಲಿಯ ಶಿವಾಜಿ ಪಾರ್ಕಿನಿಂದ ಪ್ರಧಾನಿಯ ಮನೆಗೆ ಸಾವಿರಾರು ಯುವ ಜನರು ಹಾಗೂ ವಿದ್ಯಾರ್ಥಿಗಳು ಸಾಗಿ ಬಂದು ಸ್ವಿಸ್ ಬ್ಯಾಂಕ್‌ನಲ್ಲಿ ಹಣವಿಟ್ಟ ಭಾರತೀಯರು ಯಾರು ಎಂದು ಪ್ರಶ್ನಿಸಲಿ ಎಂದಿದ್ದಾರೆ.

ಪ್ರಣಾಬ್ ಮುಖರ್ಜಿಯವರ ರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್‌ನ ಕಛೇರಿಯಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷದ ಯುವ ಜನ ಸಂಘಟನೆಗಳ ನಾಯಕರು ಸಭೆ ಸೇರಿ ಈ ತೀರ್ಮಾನ ಕೈಗೊಂಡಿದ್ದಾರೆ.

ಈಗಾಗಲೇ ರಾಷ್ಟ್ರಪತಿಗಳಿಗೆ ಬೆಫೋರ್ಸ್, ಪ.ಜರ್ಮನಿಯ ಸಬ್ ಮೇರಿನ್ ಹಾಗೂ ಫೇರ್‌ಫಾಕ್ಸ್ ಅವ್ಯವಹಾರಗಳ ಬಗ್ಗೆ ಮನವಿ ನೀಡಿದರೂ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಆದುದರಿಂದ ಈ ಹೋರಾಟ ಕಾರ್ಯಕ್ರಮವನ್ನು ರೂಪಿಸಬೇಕಾಯಿತು ಎಂದು ಇವರು ತಿಳಿಸಿದ್ದಾರೆ.

ಇದು ಫಲನೀಡದಿದ್ದರೆ ಆಗಸ್ಟ ತಿಂಗಳಲ್ಲಿ ರಾಜ್ಯ ಮಟ್ಟದಲ್ಲಿ ಹೋರಾಟ ಕಾರ್ಯಕ್ರಮ ರೂಪಿಸಲಾಗುವುದೆಂದು ಯುವ ಜನ ಸಂಘಟನೆಗಳ ಈ ನಾಯಕರು ತಿಳಿಸಿದ್ದಾರೆ.

ಈ ಸಭೆಯಲ್ಲಿ ಡಿ.ವೈ.ಎಫ್.ನ ಪರವಾಗಿ ಹನನ್‌ಮೊಲ್ಲಾ,ಎಂ.ಪಿ. ಎಂ ಎ ಬೇಬಿ, ಎಂ.ಸಿ. ಹಾಗೂ ಎಸ್. ಎಫ್ ಐ. ನಿಂದ ವಿಜಯ ರಾಘವನ್, ನಿಲೋತ್ಪಲ ಬಸು ಭಾಗವಹಿಸಿದ್ದರು. ○

ಪ್ರಾಂತ ರೈತ ಸಂಘದ ಮೆರವಣಿಗೆ

ಕರ್ನಾಟಕ ಪ್ರಾಂತ ರೈತ ಸಂಘದ ಶಿರಸಿ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ನೂರಾರು ರೈತರು ಏಪ್ರಿಲ್ 8ರಂದು ಎಂಟು ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮೆರವಣಿಗೆ ನಡೆಸಿದರು. ಕಾ. ಪಿ ಜಿ. ಮಶಾಲ್ದಿ ಇದರ ನೇತೃತ್ವ ವಹಿಸಿದ್ದರು. ಶಿರಸಿ ಟೌನಿನ ಮುಖ್ಯ ಬೀದಿಗಳ ಮೂಲಕ ಹಾದು ಬಂದ ಮೆರವಣಿಗೆ ಅಸಿಸ್ಟೆಂಟ್ ಕಮಿಷನರ್ ಕಛೇರಿ ತಲುಪಿ ಅವರ ಮೂಲಕ 8 ಬೇಡಿಕೆಗಳುಳ್ಳ ಮನವಿಯನ್ನು ಮುಖ್ಯಮಂತ್ರಿಗಳಿಗೆ ತಲುಪಿಸಲಾಯಿತು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ.ಬಂಗಾರೇಶ್ವರ ಮತ್ತು ಕಾ. ಪಿ.ಜಿ. ಮಶಾಲ್ದಿ ಮಾತನಾಡಿದರು.

ಶಿರಸಿ ತಾಲ್ಲೂಕಿನ ಪೂರ್ವ ಭಾಗವನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿ ಕಂದಾಯ ಮನ್ನಾ ಮಾಡಬೇಕು. ರೈತರ ಮೇಲಿನ ಎಲ್ಲಾ ಸಾಲವನ್ನು ರದ್ದು ಮಾಡಬೇಕು. ಮುಂದಿನ ಬೆಳೆಗೆ ಅನುಕೂಲವಾಗುವಂತೆ ಪುನಃ ಸಾಲವನ್ನು ನೀಡಬೇಕು, ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಮುಂತಾದವು ಪ್ರಮುಖ ಬೇಡಿಕೆಗಳಾಗಿವೆ.

ಈ ವಾರ....

★ ತನಗೇನೂ ತಿಳಿಯದು ಎಂದು ಇದುವರೆಗೆ ಹೇಳುತ್ತಿದ್ದ ಅಧ್ಯಕ್ಷ ರೇಗನ್ ಈಗ ಕಂಟ್ರಾಗಳಿಗೆ ಖಾಸಗೀ ನಿಧಿಸಹಾಯದ ಬಗ್ಗೆ ತನಗೆ ಬಹಳಷ್ಟು ಗೊತ್ತಿದೆ. ಇದೆ ತನ್ನ ಪ್ರಥಮ ಆಶಯ ಕೂಡಾ ಎಂದು ಹೇಳಲಾರಂಭಿಸಿದ್ದಾರೆ. ಅವರೇನೂ ಕಾನೂನು ಬಾಹಿರ ಕೆಲಸಮಾಡಿಲ್ಲ ಎಂದು ಪ್ರತಿ ಪಾದಿಸುವ ಬಗ್ಗೆ ಶ್ವೇತ ಭವನ ಈಗ ಹೆಚ್ಚು ಒತ್ತು ಹಾಕಲಾರಂಭಿಸಿದೆ.

ರ್‍ಯಾಟರ್ ಮತ್ತು ಪಿ.ಟಿ.ಐ. ವರದಿ,ಮೇ 18 ಮತ್ತು19

★ ಕೋಕಾ ಕೋಲಾವನ್ನು ಹೊರಗಟ್ಟಿದ ಸುಮಾರು ಒಂದು ದಶಕದ ನಂತರ ಅಮೇರಿಕಾದ ಕೋಲಾ ಮತ್ತೆ ಭಾರತಕ್ಕೆ ಮರಳಿದೆ ಮುಂಬೈಯಲ್ಲಿ ಆದಿವಾಸಿ ಭಾರತೀಯರ 5 ಕೋಟಿ ರೂ. ಹಣ ತೊಡಗಿಸಿದ 'ಡಬಲ್ ಕೋಲಾ' ಮಾರುಕಟ್ಟೆಗೆ ಬಂದಿದೆ.

ಪಿ.ಟಿ.ಐ. ಸುದ್ದಿ, ಮಾ. 15

★ (ಕೋಮು) ವೈಮನಸ್ಯದ ಮೂಲಗಳನ್ನು ಪತ್ತೆ ಮಾಡಿ ಅವುಗಳಿಗೆ ಚಿಕಿತ್ಸೆ ಕೊಡುವದೀರ್ಘಾವಧಿ ತಂತ್ರಗಳನ್ನು ಅನುಸರಿಸುವ ದೂರದೃಷ್ಟಿ ಮತ್ತು ಸಾಮರ್ಥ್ಯ ಆಡಳಿತಾಂಗಗಳಲ್ಲಿ ಇದುವರೆಗೆ ಕಂಡು ಬಂದಿಲ್ಲ. ಈ ಕೋಮು ಶಕ್ತಿಗಳು ರಾಜಕೀಯ ಪ್ರೋತ್ಸಾಹದಿಂದ ಎಷ್ಟು ಬೆಳೆದಿವೆ ಎನ್ನುವುದನ್ನು ವಿವರಿಸುವ ಅಗತ್ಯವೇ ಇಲ್ಲದಷ್ಟು ಜನರಿಗೆ ಅರ್ಥವಾಗಿ ಹೋಗಿದೆ.

–ಪ್ರಜಾವಾಣಿ, ಮೇ. 21.

★ ಶ್ರೀಲಂಕಾ ಸರ್ಕಾರ ಬಾಡಿಗೆಗೆ ಕರೆಸಿರುವ ಬ್ರಿಟಿಶ್ ಕೂಲಿ ಸೈನಿಕರನ್ನೊದಗಿಸುವ ಕಂಪೆನಿಯಾದ ಕೀನಿ ಮೀನೆ ಸರ್ವಿಸಸ್ ಶ್ರೀಲಂಕಾದ ವಿಶೇಷ ಪಡೆಯನ್ನು ನಿರಪರಾಧಿ ತಮಿಳರ ಬೇಟೆಯಾಡುವ ಅಮಾನುಷ ಸಾವಿನದಳದನ್ನಾಗಿಸಿದೆಯೆಂದ ಪಾಶ್ಚಿಮಾತ್ಯ ರಾಜತಾಂತ್ರಿಕರು ತಲೆ ಹಾಕಿರುವ ಸಾಮೂಹಿಕ ನರಹತ್ಯೆಗಳ ವಿವರಗಳಿಂದ ತಿಳಿದು ಬಂದಿದೆ

ವಾಶಿಂಗ್ಟನ್ ಟೈಮ್ಸ್,ಮಾ.20.

★ ರಕ್ಷಣಾ ವ್ಯವಹಾರ ಹಗರಣದಲ್ಲಿರುವ ಸ್ವೀಡಿಷ್ ಕಂಪೆನಿ ಬೋಫೋರ್ ಸುಮಾರು 3 ಕೋಟಿ ರೂಗಳ ಹಳೆಯ ನಿರುಪಯುಕ್ತ ಯಂತ್ರಗಳನ್ನು ಸಾರ್ವಜನಿಕ ವಲಯದ ಭಾರತೀಯ ಔಷಧಿ ತಯಾರಿಕಾ ಸಂಸ್ಥೆಗೆ ಮಾರಿದ್ದು, ಇದರಿಂದಾಗಿ ಬಹಳಷ್ಟು ಉತ್ಪಾದನಾ ಹಾನಿ ಹಾಗೂ ಯಂತ್ರಗಳಲ್ಲಿ ವಿಸ್ಫೋಟದಿಂದ ನಷ್ಟ ಆಗಿದೆಯೆಂದು ತಿಳಿದು ಬಂದಿದೆ. ಈ ಯಂತ್ರಗಳನ್ನು ಇದಕ್ಕೆ ಮೊದಲು ಇರಾನ್ ಕೊಳ್ಳಲು ನಿರಾಕರಿಸಿತ್ತಂತೆ.

ಡೆಕ್ಕನ್ ಹೆರಾಲ್ಡ್ ಸುದ್ದಿ, ಮೇ. 22

★ ಐದು ರಾಜ್ಯಗಳಲ್ಲಿ ಈಗ ಅಸಂಘಟಿತ ಹಾಗು ಕೃಷಿ ವಲಯದಲ್ಲಿನ ಕನಿಷ್ಟ ಕೂಲಿ ರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿಕೊಂಡಿರುವ ರೂ. 11 ಕ್ಕಿಂತ ಕಡಿಮೆಯಿದೆ—ಮಹಾರಾಷ್ಟ್ರ (ರೂ. 6), ಕರ್ನಾಟಕ [ರೂ. 9.50], ಒರಿಸ್ಸಾ ಮತ್ತು ಬಿಹಾರ್ (ರೂ. 10) ಹಾಗೂ ಮಧ್ಯ ಪ್ರದೇಶ [ರೂ: 10.40]

–ಪಿ.ಟಿ.ಐ. ಸುದ್ದಿ, ಮೇ. 21.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P· RamachandraRao
Managing Editor : N. K. Upadhyaya